# ನೇಸರು

## ತಿಂಗಳೋಲೆ

## ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE    Vol XX - 9    ಸೆಪ್ಟೆಂಬರ್ 2002

## ಈ ಸಂಚಿಕೆಯಲ್ಲಿ

ಅಸೋಸಿಯೇಶನ್ನಿನಲ್ಲಿ...

ಬಣ್ಣದ ಬದುಕಿನ ಚಿನ್ನದ ಹಾಡುಗಳಿಗೆ ಚೈತನ್ಯ ತುಂಬುವ ಬಿ. ಜಯಶ್ರೀ • ಡಾ. ಜಿ. ಎಸ್. ಉಪಾಧ್ಯ 2

ಪ್ರಭಾತ ಕಲಾವಿದರಿಂದ ''ಶ್ರೀ ಕೃಷ್ಣ ವೈಜಯಂತ'' ನೃತ್ಯರೂಪಕ • ರಮಾವಸಂತ್ 3

ಬಿ. ವಿ. ಕಾರಂತರು ಇನ್ನಿಲ್ಲ • ಪ್ರಸಾದ್ 5

ಭಾರತೀಯ ಕಲೆ - ಭಾಗ 8

ಕೃಪೆ : ಎನ್. ಮರಿಶಾಮಾಚಾರ್‌ರವರ ಭಾರತೀಯ ಕಲೆ 6

ಹುಚ್ಚು • ಜೆ.ಬಿ. ಜೇವೂರ 11

ಸುತ್ತ-ಮುತ್ತ 12

ಕವನ • ಕೃಷ್ಣಮೂರ್ತಿ ಕಲುಮಂಗಿ. 14

**The Mysore Association, Mumbai**

393, Bhaudaji Road, Matunga, Mumbai-400 019.

Tel.: 402 46 47 • Grams: "KARUNADU"

ಅಸೋಸಿಯೇಷನ್ ಸುದ್ದಿ

# ಬಣ್ಣದ ಬದುಕಿನ ಚಿನ್ನದ ಹಾಡುಗಳಿಗೆ ಚೈತನ್ಯ ತುಂಬುವ ಬಿ. ಜಯಶ್ರೀ



ಜಯಶ್ರೀ ಅವರು ರಂಗಗೀತೆಯನ್ನು ಹಾಡುತ್ತಿರುವುದು.

ಕನ್ನಡ ರಂಗಭೂಮಿಗೆ ಅನುಪಮ ಕೊಡುಗೆ ನೀಡಿದ ಮಹಿಳೆಯರಲ್ಲಿ ಬಿ. ಜಯಶ್ರೀ ಅವರದು ಎದ್ದು ಕಾಣುವ ಹೆಸರು ತಮ್ಮ ನಟನಾ ಕೌಶಲ ಹಾಗೂ ಕಂಠ ಸಿರಿಯ ಮುಖಾಂತರ ಪ್ರೇಕ್ಷಕರ ಮನಸೂರೆಗೊಂಡಿರುವ ಅವರು ತಮ್ಮ ವ್ಯಕ್ತಿತ್ವವನ್ನು ತಾವೇ ರೂಪಿಸಿ ಕೊಂಡವರು. ಜೊತೆಗೆ ಅಜ್ಜ (ಗುಬ್ಬಿ ವೀರಣ್ಣ)ನ ಆಶೀರ್ವಾದ ಹಾಗೂ ಮಾರ್ಗದರ್ಶನವನ್ನು ಪಡೆದು ರಂಗಭೂಮಿಯಲ್ಲಿ ಮಿಂಚಿದವರು. ಹೆಚ್ಚಿನ ರಂಗ ನಟಿಯರನ್ನು ಸಿನಿಮಾರಂಗ ಸೆಳೆದುಕೊಂಡರೂ, ಬಿ. ಜಯಶ್ರೀ ಅವರು ರಂಗ ಭೂಮಿಯ ನಂಟು ತೊರೆದವರಲ್ಲ. ರಂಗಭೂಮಿ ಅವರ ಮೊದಲ ಆಯ್ಕೆ. ಅಲ್ಲಿಯೇ ಅವರಿಗೆ ವಿಶೇಷ ಸಮಾಧಾನ. ಕನ್ನಡ ರಂಗಭೂಮಿಯಲ್ಲಿ ನಾಮಾಂಕಿತರಾದ ಕೆಲವೇ ಕೆಲವು ಮಹಿಳೆಯರಲ್ಲಿ ಬಿ. ಜಯಶ್ರೀಯವರೂ ಒಬ್ಬರು. ನಟರಾಗಿ, ನಿರ್ದೇಶಕರಾಗಿ ನಾಡಿನ ಮೂಲೆ ಮೂಲೆಯನ್ನು ಸುತ್ತಿದ ಅವರು ರಂಗಭೂಮಿಯ ಒಳಹೊರಗನ್ನು ಬಲ್ಲವರು. ಆದರೆ ಎಂದೂ ತನಗೆಲ್ಲ ಗೊತ್ತಿದೆ ಎಂದು ಏರು ಧ್ವನಿಯಲ್ಲಿ ಹೇಳಿಕೊಂಡವರಲ್ಲ. ಸೌಜನ್ಯಕ್ಕೆ ಅವರು ಮತ್ತೊಂದು ಹೆಸರು. ಹೀಗಾಗಿ ನಾಟಕ ರಂಗದಲ್ಲಿ ಜಯಶ್ರೀ ಅವರಿಗೆ ಜಯವಾಯಿತು. ಅನೇಕ ಪ್ರಶಸ್ತಿ ಪುರಸ್ಕಾರ ಮಾನ ಸಮ್ಮಾನಕ್ಕೂ ಅವರು ಪಾತ್ರರಾದವರು. ಇತ್ತೀಚೆಗಷ್ಟೇ ಶಂಕರಲಿಂಗೇ ಗೌಡ ಪ್ರಶಸ್ತಿಯೂ ಅವರ ಸಾಧನೆಗೆ ದೊರೆತ ಮತ್ತೊಂದು ಗರಿ. ಈಗಲೂ ಉತ್ಸಾಹದಿಂದ ಪುಟಿಯುವ ಅವರು ಕೈತುಂಬ ರಂಗಕಾಯಕವನ್ನು ಎತ್ತಿಕೊಂಡಿದ್ದಾರೆ. ಬಣ್ಣದ ಬದುಕಿನ ಚಿನ್ನದ ಹಾಡುಗಳಿಗೆ ಚೈತನ್ಯ ತುಂಬುವ ನಿಟ್ಟಿನಲ್ಲಿ ಪತಿ ಆನಂದ್ ಅವರೊಂದಿಗೆ ಅಹರ್ನಿಶಿ ಕೆಲಸ ಮಾಡುತ್ತಿದ್ದಾರೆ. ಈ ನಡುವೆ ಸಾಗರ ದಾಚೆಯಿಂದ ನಾಟಕ ಪ್ರೇಮಿಗಳ ಅಭಿಮಾನಿಗಳ ಬುಲಾವ್ ಅಮೇರಿಕಾದ ಒಂದು ಸಂಸ್ಥೆಯ ಪರವಾಗಿ ನಾಟಕವೊಂದನ್ನು ನಿರ್ದೇಶಿಸಲು ಜಯಶ್ರೀ ಹಾಗೂ ಆನಂದ್ ಮುಂಬಯಿ ಮೂಲಕ ವಿದೇಶಕ್ಕೆ ತೆರಳುವವರಿದ್ದರು: ಅವರಿಗೆ ತುಸು ಬಿಡುವಿತ್ತು. ಈ ಮಹಾನಗರದಲ್ಲಿ ! ಇದನ್ನು ತಿಳಿದು ಮೈಸೂರು ಅಸೋಸಿಯೇಷನ್ ಮಿತ್ರರು ಜಯಶ್ರೀ ಅವರೊಂದಿಗೆ ಸಂವಾದ ಕಾರ್ಯಕ್ರಮವನ್ನು ಆಯೋಜಿಸಿದ್ದರು. ರಂಗಭೂಮಿ, ಸಂಗೀತ, ತಮ್ಮ ಮುಂದಿನ ಯೋಜನೆಗಳನ್ನು ಅವರು ವಿವರಿಸಿದರಲ್ಲದೆ ಬಣ್ಣದ ಬದುಕಿನ ಚಿನ್ನದ ಹಾಡುಗಳನ್ನು ಆಯ್ದು ಹೆಕ್ಕಿ ಹಾಡಿ ರುಚಿ ತೋರಿಸಿ ರಂಗಾಸಕ್ತರಿಗೆ ಮುದ ನೀಡಿದವರು. ನಾಟಕ, ಅಭಿನಯ ಹಾಗೂ ನಿರ್ದೇಶನ ಈ ಮೂರನ್ನು ಮೇಳವಿಸಿಕೊಂಡು ಬಂದ ಅವರು ಗುಬ್ಬಿ ಕಂಪನಿಯ ಗತ ದಿನಗಳನ್ನು ಅದು ಬೆಳೆದು ಬಂದ ಬಗೆಯನ್ನು ಅನನ್ಯವೆಂಬಂತೆ ದಾಖಲಿಸಲು ಹೊರಟಿದ್ದನ್ನೆಲ್ಲ ಹೇಳಿದರು. ''ಅಂದಿನ ರಂಗಭೂಮಿಯಲ್ಲಿ ಸಂಗೀತಕ್ಕೆ ವಿಶೇಷ ಮನ್ನಣೆ ಇತ್ತು. ಸಂಗೀತ ಗೊತ್ತಿಲ್ಲದವರಿಗೆ ರಂಗ ಭೂಮಿಯಲ್ಲಿ ಎಂಟ್ರಿ ಇರ್‍ತಾ ಇರಲಿಲ್ಲ. ಈ ಸಂಗೀತದಲ್ಲೂ ವೈವಿಧ್ಯವಿತ್ತು. ವೀರಣ್ಣನವರಿಂದ ಕಾರಂತರ ವರೆಗಿನ ಪರಂಪರೆಯನ್ನು ನಾವು ಮಲ್ಟಿಮೀಡಿಯಾದಲ್ಲಿ ಸೆರೆಹಿಡಿಯುವ ಪ್ರಯತ್ನ ಮಾಡುತ್ತಿರುವುದಾಗಿ ಜಯಶ್ರೀ ಹೇಳಿದಾಗ ಅದರ ತಂತ್ರದ ಕುರಿತು ಆನಂದ್ ಕೆಲವು ಮಾಹಿತಿಗಳನ್ನು ತಿಳಿಸಿಕೊಟ್ಟರು. ಇಂದು ಕೆಲವರಾದರೂ ಸಿನಿಮಾದಿಂದ ಥಿಯೇಟರ್‌ಗೆ ಬರುತ್ತಿರುವುದು ಸಮಾಧಾನದ ಸಂಗತಿ. ತಾನು ರಂಗಭೂಮಿಯಲ್ಲಿ ಕಲಿತದ್ದಕ್ಕಿಂತ ಕಲಿಯಬೇಕಾದದ್ದು ಇನ್ನೂ ಇದೆ ಎಂದು ಹೇಳಲು ಅವರು ಮರೆಯಲಿಲ್ಲ.

ಡಾ. ಮಂಜುನಾಥ್, ಮಂಜುನಾಥಯ್ಯ, ತಾರಾ ಭಟ್ ಮೊದಲಾದವರು ಈ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಅಸೋಸಿಯೇಷನ್‌ನ ಕಾರ್ಯದರ್ಶಿ ಪ್ರಸಾದ್ ಅವರು ಕಾರ್ಯಕ್ರಮವನ್ನು ರೂಪಿಸಿ ಭಾಗಿಗಳಾದ ಎಲ್ಲರಿಗೂ ಧನ್ಯವಾದ ಹೇಳಿದರು. ಮುಂಬಯಿಯ ಅನೇಕ ಹಿರಿಕಿರಿಯ ಕಲಾವಿದರು, ರಂಗಾಸಕ್ತರು ಈ ಕಾರ್ಯಕ್ರಮದಲ್ಲಿ ಸೇರಿ ಕಲಾವಿದೆ ಜಯಶ್ರೀ ಅವರ ಪ್ರತಿಭೆ ಹಾಗೂ ಅಭಿನಯವನ್ನು ಕಂಡು ಖುಷಿಪಟ್ಟರು.

- ಡಾ. ಜಿ. ಎನ್. ಉಪಾಧ್ಯ

ಚಿತ್ರಗಳು : ರೋನ್ಸ್ ಬಂಟ್ವಾಳ



ಅಸೋಸಿಯೇಷನ್ನಿನ ಅಧ್ಯಕ್ಷ ದೊರೆಸ್ವಾಮಿಯವರು ಆನಂದ ರಾಜು ಮತ್ತು ಜಯಶ್ರೀಗೆ ಪುಷ್ಪ ಗೌರವ ಸಲ್ಲಿಸುತ್ತಿದ್ದಾರೆ.

# ಪ್ರಭಾತ ಕಲಾವಿದರಿಂದ "ಶ್ರೀ ಕೃಷ್ಣ ವೈಜಯಂತ" ನೃತ್ಯರೂಪಕ

ಶ್ರೀಕೃಷ್ಣನ ಕಥೆಯನ್ನು ಕೇಳದವರಿಲ್ಲ, ಕೃಷ್ಣ ಲೀಲೆಗಳನ್ನು ಕೇಳಿ ಸಂತೋಷಪಡದವರಿಲ್ಲ. 'ವಸುಧೆಯ ಭಾರವ ನೀಹಲು ಜನಿಸಿದ ವಸುದೇವ ನಂದನ ಶ್ರೀಕೃಷ್ಣ' ಎಂದು ಹೇಳುತ್ತಾರೆ ಆದರೆ ಸಹನೆ, ತಾಳ್ಮೆಯ ಮೂರ್ತಿಯಾಗಿರುವ ಭೂಮಿತಾಯಿ ಯಾವುದೂ, ಭಾರವಿಲ್ಲ, ಎಷ್ಟು ಭಾರವನ್ನಾದರೂ ಹೊರಬಲ್ಲಳು. ಆದರೆ ಭೂಮಿಯ ಮೇಲೆ ಜನರು ಮಾಡುವ ಪಾಪ ಕೃತ್ಯಗಳ ದುಷ್ಟತನ ಕ್ರೌರ್ಯ ಇಂತಹ ಪಾಪಗಳ ಭಾರವನ್ನು ಹೊರಲಾರಳು. ಈ ಭಾರವನ್ನಿಳಿಸಿ ಲೋಕಕಲ್ಯಾಣವನ್ನುಂಟು ಮಾಡಲು ಅವತರಿಸಿದ ಶ್ರೀಕೃಷ್ಣ, ಕೃಷ್ಣನು ಅನೇಕ ರೂಪಗಳನ್ನು ತಾಳಿ ಅನೇಕ ಲೀಲೆಗಳನ್ನು ತೋರಿಸಿದ್ದಾನೆ. 'ಆಪದ್ಬಾಂಧವ ಅನಾಥ ರಕ್ಷಕ, ಗೋವರ್ಧನ ಗಿರಿಧಾರ ಕಡಗೋಲ ಕೃಷ್ಣ, ಬೆಣ್ಣೆ ಕೃಷ್ಣ ಹೀಗೆ ಹಲವಾರು ನಾಮಗಳು, ಇಂತಹ ಶ್ರೀಕೃಷ್ಣನ ಲೀಲೆಯನ್ನು ಬೆಂಗಳೂರಿನ ಹೆಸರಾಂತ 'ಪ್ರಭಾತ್ ಕಲಾವಿದರ ತಂಡವು ನಮ್ಮ ಅಸೋಸಿಯೇಶನ್ನಿನ ಸಭಾಂಗಣದಲ್ಲಿ ಶ್ರೀ ಕೃಷ್ಣ ವೈಜಯಂತಿ ಎಂಬ ನೃತ್ಯ ರೂಪಕದಲ್ಲಿ ಸೆಪ್ಟೆಂಬರ್ 1ನೇ ತಾರೀಕಿನಂದು ಪ್ರಸ್ತುತಪಡಿಸಿದರು.

ಪ್ರಭಾತ್ ಕಲಾವಿದರು ಸುಮಾರು 70 ವರ್ಷಗಳಿಂದಲೂ ರಂಗ ಪ್ರಯೋಗಗಳನ್ನು ಮಾಡುತ್ತಿದ್ದಾರೆ. ಸ್ವಾತಂತ್ರ್ಯ ಪೂರ್ವದಿಂದ ಇರುವ ಸಂಸ್ಥೆ, ಸ್ವಾತಂತ್ರ ಸಂಗ್ರಾಮದ ಸಮಯದಲ್ಲಿ ಈ ಸಂಸ್ಥೆ ಹಿರಿಯರು ಪ್ರಜೆಗಳಿಗೆ ಸ್ವಾತಂತ್ರ್ಯದ ಬಗ್ಗೆ ಅಪಾರವಾದ ಅರಿವನ್ನು ಮೂಡಿಸಿದ್ದಾರೆ. ಇವರು ರಂಗ ಮಾಧ್ಯಮದಲ್ಲಿ ಐತಿಹಾಸಿಕ, ಪೌರಾಣಿಕ ಸನ್ನಿವೇಶಗಳನ್ನು ಕುರಿತು ಅನೇಕ ರೂಪಕ, ನೃತ್ಯ, ನಾಟಕ, ಏಕಾಂಕಗಳು ಹಾಗೂ ಹಾಡುಗಾರಿಕೆಗಳ ಮೂಲಕ ಜನಗಳ ಮೆಚ್ಚುಗೆಯನ್ನು ಪಡೆದಿದ್ದಾರೆ



*ಕಂಸ ಸಭೆಯಲ್ಲಿ ಮುಷ್ಟಿ ಯುದ್ಧ*

ಸ್ವಾತಂತ್ರ್ಯ ಇವರು 'ಸಿಂಡ್ರೆಲ್ಲಾ' 'ಕಿಂದರಿ ಜೋಗಿ' ಮೊದಲಾದ ನೃತ್ಯ ರೂಪಕಗಳನ್ನು ಪುಟಾಣಿಗಳಿಂದ ಆಡಿಸಿ ಪ್ರದರ್ಶಿಸಿದ್ದಾರೆ.

ಸೆಪ್ಟೆಂಬರ್ 1ರಂದು ಬೆಳಿಗ್ಗೆ 11.30 ಗಂಟೆಗೆ ಕಾರ್ಯಕ್ರಮವು ಆರಂಭವಾಯಿತು. ಪ್ರಸಾದ್‌ರವರು ಸ್ವಾಗತಿಸಿದರು ಮತ್ತು ಅಧ್ಯಕ್ಷರಾದ ದೊರೆ ಸ್ವಾಮಿಯವರು ಪುಷ್ಪವನ್ನು ಕೊಟ್ಟು ಗೌರವಿಸಿದರು. ಕೃಷ್ಣನ ಪ್ರಾರ್ಥನೆಯಿಂದ ರೂಪಕವು ಆರಂಭವಾಯಿತು. 'ಗೋಕುಲ ಸಗಂಭೀರ ಕೃಷ್ಣ ಉಡುಪಿ ಪುರವಾಸ ಮಧ್ವಪತಿ ಕಡಗೋಲ ಹಿಡಿದ ಶ್ರೀ..... ಉಡುಪಿಯಲ್ಲಿ ಶ್ರೀ ಮಧ್ವಾಚಾರ್ಯರು ಕೃಷ್ಣನನ್ನು ಸ್ಥಾಪಿಸಿದರು. ಯಶೋಧ ಹಾಗೂ ಸಖಿಯರು ನಂದಗೋಕುಲದಲ್ಲಿ ಕೃಷ್ಣನೊಡನೆ ಹಾಡಿ, ಹಾಡಿ, ಸಂಭ್ರಮದಿಂದ ಸಂತೋಷದಿಂದ ಕಾಲಕಳೆಯುತ್ತಿದ್ದರು. ಬಾಲಕೃಷ್ಣ ನನ್ನು ಜೋಗುಳ ಹಾಡಿ ತೂಗಿ ಮಲಗಿಸಿರಲು 'ನಿನ್ನನ್ನು ಕೊಂದು ಕಂಸನ ಮೃತ್ಯುವನ್ನು ಗೆದ್ದು, ನಾ ನಗುವೆ ಎಂದು ರಾಕ್ಷಸಿ ಪೂತನಿಯು ಸುಂದರಿಯಂತೆ ವೇಷಧರಿಸಿ ಬರುತ್ತಾಳೆ. ಆದರೆ ಕೃಷ್ಣ ಅರಿಯನೆ ಇವಳ ಮಾಯೆಯನ್ನು, ತನ್ನ ಬಾಲಲೀಲೆಯಿಂದ ಇವಳನ್ನು ಸಂಹರಿಸುತ್ತಾನೆ. ತ್ರಿಲೋಕ ಸಂಚಾರಿ ನಾರದ 'ನಾರಾಯಣನನಿಳಿನೋದರ... ಎಂದು ಹಾಡುತ್ತಾ ಯಮುನಾ ತೀರಕ್ಕೆ ಬಂದಾಗಳಲ್ಲಿ ಕೃಷ್ಣನ ಸಖಿಯರನ್ನು ನೋಡಿ 'ಏನಿದೇನಿದು ಸುರನಾರಿಯರು ಯಮುನಾ ತೀರಕ್ಕೆ ಬಂದಿದ್ದೇಕೆ' ಎನ್ನಲು 'ನಂದನ ಭಾಗ್ಯವ ಯಶೋಧೆಯ ಸುಕೃತವ ಕಣ್ಣಾರೆ ಕಾಣೆ ಸುಖಿಸಲು' ಎನ್ನುತ್ತಾರೆ. ಶ್ರೀ ಕೃಷ್ಣ ಪರಮಾತ್ಮನನ್ನೇ ಮಗನಾಗಿ ಪಡೆದ ಯಶೋಧೆಯ ಪುಣ್ಯವನ್ನು ಕೊಂಡಾಡುತ್ತಾರೆ. 'ಜಗವನೆತ್ತಿದವನ ಮಗುವಿನಂತೆತ್ತುವಳಂತೆ'.... ನಂತರ ಗೊಲ್ಲ ಬಾಲಕರೊಡಗೂಡಿ ಗೊಲ್ಲತಿಯರ ಮನೆಯ ಬೆಣ್ಣೆ ಕದಿಯುವುದು, ಗೊಲ್ಲತಿಯರು ಯಶೋಧೆಗೆ ದೂರು ಹೇಳುವ ದೃಶ್ಯ. ತಾಯಿ ವಾತ್ಸಲ್ಯ ಈ ದೂರುಗಳನ್ನು ನಂಬುತ್ತಾಳೆಯೇ? 'ಏಕೆ ದೂರುತ್ತೀರಾ ಮುದ್ದು ರಂಗಯ್ಯನ' ಎನ್ನು ತ್ತಾಳೆ. ನಂತರ ಕಾಳಿಂಗನ ವಧೆ 'ದುಷ್ಟ ನಿಗ್ರಹ ಶಿಷ್ಟ ರಕ್ಷಣ' ಇದೇ ಕೃಷ್ಣಾವತಾರದ ಧ್ಯೇಯ. ಪುರಂದರ ದಾಸರ ಒಂದು ಕೃತಿಯಲ್ಲಿ 'ಫಣೆಯ ಮೆಟ್ಟಿ ಬಾಲವ ಕೈಯಲ್ಲಿ ಹಿಡಿದು..... ದುಷ್ಟ ಕಾಳಿಂಗನ ಮೆಟ್ಟಿ ಭರದಿಂದ ಪುಟ್ಟ ಪಾದವನ್ನಿಟ್ಟು ಶ್ರೀಕೃಷ್ಣನು' ಎನ್ನುವಂತೆ. ಪ್ರಭಾತ್ ತಂಡದ ಕೃಷ್ಣನ ಪಾತ್ರಧಾರಿ ತನ್ನ



*ಕಾಳಿಂಗ ಮರ್ದನದ ದೃಶ್ಯ.*



*ಗೋಪಿಯವರೊಂದಿಗೆ ಕೃಷ್ಣ*

ಪುಷ್ಪಪಾದಗಳಿಂದ ಕಾಳಿಂಗನನ್ನು ತುಳಿದು ಹಾವ ಹಣೆಯ ಮೇಲೆ ನರ್ತಿಸಿ ಪ್ರೇಕ್ಷಕರ ಮೆಚ್ಚುಗೆ ಗಳಿಸಿದನು.

ನಂತರ ಕಂಸಾಸುರನ ಸಂಹಾ, ಕಂಸಾಸುರನು ಕೃಷ್ಣನ ಬಲರಾಮನನ್ನು ತನ್ನ ಆಸ್ಥಾನಕ್ಕೆ ಬರಮಾಡಿಕೊಂಡು ಉಪಾಯದಿಂದ ಅವರನ್ನು ಕೊಲ್ಲುವ ಸಂಚು ಮಾಡಿರುತ್ತಾನೆ. ಎಲ್ಲವನ್ನೂ ತಿಳಿದ ಆ ಶ್ರೀಕೃಷ್ಣನು ಕ್ಷಣಾರ್ಧದಲ್ಲಿ ಕಂಸನನ್ನು ಸಂಹರಿಸುತ್ತಾನೆ. ನಂತರ ಕೃಷ್ಣನು ಪ್ರೌಢಾವಸ್ಥೆ ಇಲ್ಲಿ ಕೃಷ್ಣನು ರುಕ್ಮಿಣಿಯನ್ನು ವಿವಾಹವಾದ ದೃಶ್ಯ. ಕೃಷ್ಣನ ಲೀಲೆಗಳು ಒಂದೇ ಎರಡೇ ಹಲವಾರು.



*ಕೃಷ್ಣ ರುಕ್ಮಿಣಿಯರೊಂದಿಗೆ*

ನಂತರ ಗೀತೋಪದೇಶ, ಕೃಷ್ಣನ ಅವತಾರದಲ್ಲಿ ಬಹಳ ಪ್ರಮುಖ ಘಟ್ಟ, ಲೋಕ ಕಲ್ಯಾಣಕ್ಕಾಗಿ ಸಾರಿದ ಉಪದೇಶ. ದುಷ್ಟತನ, ದುಷ್ಕೃತ್ಯಗಳೇ ತಾಂಡವವಾಡುತ್ತಿರುವ ಕಲಿಯುಗಕ್ಕೆ ಇದು ಅತ್ಯಮೂಲ್ಯವಾದುದ್ದು. ಮಹಾಭಾರತ ಯುದ್ಧದಲ್ಲಿ ಅರ್ಜುನನು ನನ್ನ ಆತ್ಮೀಯರು ಬಂಧು ಬಳಗಗಳು ಎಲ್ಲ ನೆರೆದಿದ್ದಾರೆ. ನಾನು ಯುದ್ಧ ಮಾಡುವುದಿಲ್ಲ ಎಂದು ಹಿಂಜರಿದಾಗ ಕೃಷ್ಣನು 'ಅಥೋವಾ ಪ್ರಾಪ್ಯತೆ ಸ್ವರ್ಗ.... ತಸ್ಮಾದುತ್ತಿಷ್ಠಕೌಂತೇಯ ಯುದ್ಧಾ: ಕೃತ ನಿಶ್ಚಯ... ಎಂದು ಒಪ್ಪಿಸಿ 'ಸುಖೇದುಃಖೇ... ಜಯಾಜಯೌ', 'ಕರ್ಮಣ್ಯೇ ವಾಧಿಕಾರಸ್ತೆ'... ಯದಾ ಯದಾಹಿ ಧರ್ಮಸ್ಯ... ಮೊದಲಾಗಿ ಉಪದೇಶವನ್ನು ಮಾಡುತ್ತಾನೆ. ದುಷ್ಟನಿಗ್ರಹ, ಶಿಷ್ಟರಕ್ಷಣ'ವೇ ಮೂಲ ಉದ್ದೇಶ, ಗೀತೋಪದೇಶದೊಂದಿಗೆ ರೂಪಕವು ಮುಗಿಯಿತು.

ನಂತರ ಸಂಸ್ಥೆಯ ಮುಖ್ಯಸ್ಥರಾದ ಶ್ರೀ ವೆಂಕಟೇಶ್ ಅವರ ಪಾತ್ರ ಪರಿಚಯ ಮಾಡಿಕೊಟ್ಟರು. ರೂಪಕದ ನಿರ್ದೇಶನ ಉಡುಪಿ ಶ್ರೀ ಲಕ್ಷ್ಮೀ ನಾರಾಯಣಾಚಾರ್ಯ, ಸಂಗೀತ ನಿರ್ದೇಶನ ಶ್ರೀ ಪಂಡಿತ್ ವಿಜಯ ರಾಘವ ರಾವ್, ಕೃತಿಗಳ ಆಯ್ಕೆ ದಾಸ ಸಾಹಿತ್ಯ, ನಂತರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಗಿಯಿತು.

- ರಮಾವಸಂತ್


## MATRIMONIAL

Alliance invited for Kannada Smartha Bramhin Boy. ,5.9",4 Lacs/anum Looking for enterprishing Gradute. Cast No bar. Contact Mr. Swamy 022-632 7372,9821154453, 0821-54453
Email nns74@yahoo.com 8/12, Vishaka Appartment, New Link Road, Andheri (W), opp. Lotus Petrol Pump, Mumbai-400 053

***

Allince invited for a tall slim goodlooking Kshatriya (Sheregar ) girl 26-01-65 born 163 cms Convent Educated Graduate Cultured homely girl working with a reputed ltd. Co. Drawing a salary of 8000/- + p.m.
With own IBHK house. Boy should be well scttled educated having own house with an income of Rs. 15000/- p.m. Dowry people dont bothers to reply. Mumbai settled boy would be preferred but others are also welcome to reply.
Contact Mr. Ramayya Sheregar
Tel:- 555 3744

**FOR ALL YOUR DOMESTIC AND INTERNATIONAL TRAVEL ARRANGEMENTS**

*CONTACT*

**AUGUST TRAVEL SERVICE**

**Agents For INDIAN AIRLINES & JET AIRLINES**

REGD. OFFICE :
3/15, ASHIANA, SECTOR 17,
VASHI, NAVI MUMBAI
PHONES : 789 1970 * 789 1972
789 2451
GRAMS : AUGTRASERV
ALSO AT :
2/16, KABBUR HOUSE,
SION (E), MUMBAI-400 022.
PHONES : 407 2984 * 409 3573
407 7750

# ಬಿ. ವಿ. ಕಾರಂತರು ಇನ್ನಿಲ್ಲ

ಖ್ಯಾತ ರಂಗ ನಟ, ನಿರ್ದೇಶಕ, ಭಾರತದ ರಂಗಕ್ಷೇತ್ರದ ದಿಗ್ಗಜರಾದ ಬಿ.ವಿ. ಕಾರಂತರು ಸೆಪ್ಟೆಂಬರ್ 1ರಂದು ನಮ್ಮೆಲ್ಲರಿಂದ ಅಗಲಿದರು. ಈಗ ಕೆಲವು ಕಾಲದಿಂದ ಕ್ಯಾನ್ಸರ್ ಕಾಯಿಲೆಯಿಂದ ಬಳಲುತ್ತಿದ್ದ ಅವರು, ಕೆಲವು ದಿನಗಳಿಂದ ಬೆಂಗಳೂರಿನ ಒಂದು ಖಾಸಗಿ ನರ್ಸಿಂಗ್ ಹೋಂನ ICUನಲ್ಲಿ ಸೇರಿಸಲ್ಪಟ್ಟಿದ್ದರು. ಕಾರಂತರಿಗೆ 74 ವರ್ಷಗಳಾಗಿದ್ದವು.

ಕಾರಂತರ ಹುಟ್ಟು ಊರು ದಕ್ಷಿಣ ಕನ್ನಡದ ಬಂಟ್ವಾಳ ತಾಲ್ಲೂಕಿನ ಪಾಣೆ ಮಂಗಳೂರು. ಚಿಕ್ಕ ವಯಸ್ಸಿನಲ್ಲೇ ಅಲ್ಲಿಂದ ಮೈಸೂರಿಗೆ ಬಂದ ಅವರನ್ನು ಅಲ್ಲಿ ಬೀಡು ಬಿಟ್ಟಿದ್ದ ಗುಬ್ಬಿ ಕಂಪೆನಿಯು ಆಕರ್ಷಿಸಿತು. ಕಾರಂತರು ನಾಟಕದ ಕಂಪೆನಿಯನ್ನು ಸೇರಿಕೊಂಡರು. ಅಲ್ಲಿ ಅವರು ಕಳೆದ ಆರು ವರ್ಷಗಳಲ್ಲಿ ಅವರಿಗೆ ಅನೇಕ ಹೆಸರಾಂತ ನಟ, ನಟಿಯರ ಜೊತೆಯಲ್ಲಿ ಕೆಲಸ ಮಾಡುವ ಮತ್ತು ಕಲಿಯುವ ಸಂದರ್ಭ ಸಿಕ್ಕಿತು. ನಂತರ ಅವರು ಬೆಂಗಳೂರಿಗೆ ಬಂದು ಶಾಲೆಯೊಂದರಲ್ಲಿ ಹಿಂದಿ ಅಧ್ಯಾಪಕರಾದರು. ಕೆಲವು ಸಮಯದ ನಂತರ ಬನಾರಸ್ ವಿಶ್ವವಿದ್ಯಾಲಯದಲ್ಲಿ ಹಿಂದಿ ಎಂ.ಎ. ಪರೀಕ್ಷೆ ಕಟ್ಟಿದರು. ಇಲ್ಲಿ ಅವರಿಗೆ ಹಿಂದಿ ಭಾಷೆಯ ಹೆಸರಾಂತ ಸಾಹಿತಿಗಳೊಡನೆ ಪರಿಚಯ ಮತ್ತು ಒಡನಾಟ ಪ್ರಾಪ್ತವಾಯಿತು. ಇದೇ ಸಮಯದಲ್ಲಿ ಕಾರಾಂತರ ಸಂಗೀತ ಕಲಿಕೆಯೂ ಮುಂದುವರೆ ಯುತ್ತಿತ್ತು. ಅವರು ಪಂಡಿತ ಓಂಕಾರನಾಥ ಠಾಕೂರರಿಂದ ಸಂಗೀತ ತರಬೇತಿ ಪಡೆದರು.

ಕಾರಾಂತರ ಒಲಿವು ರಂಗ ಭೂಮಿಯ ಕಡೆಗೆ ಇದ್ದಿತು. ಆವರು ದಿಲ್ಲಿಯಲ್ಲಿ ತೆರೆದಿದ್ದ ರಾಷ್ಟ್ರೀಯ ನಾಟಕ ಶಾಲೆ (National School Drama)ಯನ್ನು ಸೇರಿದರು. ಕರ್ನಾಟಕದಿಂದ ಈ ಶಾಲೆಯನ್ನುಸೇರಿದವರಲ್ಲಿ ಇವರೇ ದ್ವಿತೀಯರು. ಇಲ್ಲಿ ಕಾರಾಂತರಿಗೆ ಅಲ್ಕಾಜಿ, ನೇಮಿಚಂದಜೈನ್ ಇತ್ಯಾದಿ ಪ್ರತಿಭಾವಂತ ರಂಗ ಕರ್ಮಿಗಳ ಮಾರ್ಗದರ್ಶನ ಸಿಕ್ಕಿತು. ನಾಟಕ ಶಾಲೆಯ ನಂತರ ಕಾರಾಂತರು ಕರ್ನಾಟಕದ ಹವ್ಯಾಸಿರಂಗ ಸಂಸ್ಥೆಯ ಮೂಲಕ ರಂಗ ಭೂಮಿಯನ್ನು ಸೇರಿದರು. ಆಗ ಹವ್ಯಾಸಿ ಕ್ಷೇತ್ರದಲ್ಲಿ ಅನೇಕ ಪ್ರಯೋಗಗಳು ನಡೆಯುತ್ತಿದ್ದ ಕಾಲ. ಶ್ರೀ ರಂಗರು ಹವ್ಯಾಸಿ ರಂಗ ಭೂಮಿಗೆ ಒಂದು ಹೊಸ ಕಳೆ ನೀಡುವ ಪ್ರಯತ್ನದಲ್ಲಿದ್ದರು. ಕಾರಾಂತರು ಗಿರೀಶ ಕರ್ನಾಡರ ಜೊತೆ ಸೇರಿ ಹೊಸ ಹೊಸ ಪ್ರಯೋಗಗಳನ್ನು ಮಾಡಿದರು. ಅವರ 'ಜೋಕುಮಾರಸ್ವಾಮಿ', 'ದೊರೆ ಎಡಿಪಸ್', 'ಹಯವದನ', 'ಸತ್ತವರ ನೆರಳು' ಮುಂತಾದ ನಾಟಕಗಳು ಹವ್ಯಾಸಿ ರಂಗಕ್ಕೇ ಒಂದು ಹೊಸ ದಿಶೆಯನ್ನು ತೋರಿದವು. ಕಾರಾಂತರು ಗಿರೀಶರ ಹಯವದನ ತುಘಲಖ್ ಮುಂತಾದ ನಾಟಕಗಳನ್ನು ಹಿಂದಿಗೆ ಅನುವಾದಿಸಿ ಅವನ್ನು ರಾಷ್ಟ್ರ ಮಟ್ಟದಲ್ಲಿ ಪ್ರದರ್ಶಿಸಿದರು.

ಕಾರಂತ ಮತ್ತು ಗಿರೀಶರ ಜೋಡಿ ಈ ಸಮಯದಲ್ಲಿ ರಂಗಭೂಮಿ ಮಾತ್ರವಲ್ಲದೇ ಚಲನ ಚಿತ್ರ ನಿರ್ದೇಶನಕ್ಕೂ ವ್ಯಾಪಿಸಿತು. ಅವರ ವಂಶ ವೃಕ್ಷ, ತಬ್ಬಲಿಯ ನೀನಾದೆ ಮಗನೆ. ರಾಷ್ಟ್ರ ಮಟ್ಟದ 'ಪುರಸ್ಕಾರವನ್ನು ಪಡೆಯಿತು. ಶಿವರಾಮ ಕಾರಂತರ 'ಚೋಮನ ದುಡಿ'ಯನ್ನು ಬಿ.ವಿ. ಕಾರಾಂತರ ನಿರ್ದೇಶನದಲ್ಲಿ ಬಹಳ ಯಶಸ್ವಿಯಾಗಿ ಚಿತ್ರೀಕರಿಸಲಾಯಿತು. ಈ ಚಿತ್ರಕ್ಕೆ ರಾಷ್ಟ್ರೀಯ



ಬಿ.ವಿ. ಕಾರಂತರು ರಂಗ ಉತ್ಸವವನ್ನು ಉದ್ಘಾಟಿಸುತ್ತಿರುವುದು. ಚಿತ್ರದಲ್ಲಿ ಎಡದಿಂದ ಸಂಜನಾ ಕಪೂರ್, ಪ್ರಸಾದ್, ಅಮಿತಾ ಬ್ಯಾನರ್ಜಿ, ಜಯದೇವಹತ್ತಂಗಡಿ, ದೊರೆಸ್ವಾಮಿ, ರವೀಂದ್ರನಾಥ್, ನಾಗರಾಜ್ ಮೂರ್ತಿ, ಕಾರಂತರು ಮತ್ತು ಲಕ್ಷ್ಮೀಸೀತಾರಾಮ್.

ಪುರಸ್ಕಾರವೂ ದೊರೆಯಿತು. ಗಿರೀಶ್ ಕರ್ನಾಡರ 'ಕಾಡು' ಚಿತ್ರದಲ್ಲಿ ಕಾರಂತರ ಪ್ರತಿಭೆಯ ಮತ್ತೊಂದು ಮುಖ ಹೊರತೋರಿತು. ಈ ಚಿತ್ರಕ್ಕೆ ಕಾರಂತರು ಸಂಗೀತವನ್ನು ಅಳವಡಿಸಿದ್ದರು. ಇದರೊಂದಿಗೆ ಸಂಗೀತ ಕ್ಷೇತ್ರವನ್ನು ಪ್ರವೇಶಿಸಿದ ಕಾರಂತರು ಅನಂತರ ಅನೇಕ ಚಿತ್ರಗಳಿಗೆ ಸಂಗೀತವನ್ನು ಸಂಯೋಜಿಸಿದರು. ಈ ವೇಳೆಗೆ ರಾಷ್ಟ್ರೀಯ ನಾಟಕ ಶಾಲೆಗೆ ಮುಖ್ಯಸ್ಥರಾಗಿರಲು ಕಾರಾಂತರಿಗೆ ಕರೆ ಬಂದಿತು. ಕಾರಂತರು ಮುಂದಿನ ನಾಲ್ಕೈದು ವರ್ಷಗಳು ಈ ಶಾಲೆಯ ಮುಖ್ಯಸ್ಥರಾಗಿ ಕೆಲಸ ಮಾಡಿದರು. ಈ ವೇಳೆಗೆ ಕಾರಂತರನ್ನು ಭೋಪಾಲದಲ್ಲಿರುವ ಭಾರತ ಭವನದ ರಂಗ ಮಂಡಲದ ಮುಖ್ಯಸ್ಥರಾಗಿರುವಂತೆ ಆಹ್ವಾನಿಸಿದರು. ಕಾರಂತರು ಮುಂದಿನ ಏಳು ವರ್ಷಗಳನ್ನು ಭೋಪಾಲದಲ್ಲಿ ಕಳೆದರು. ಮಧ್ಯ ಪ್ರದೇಶದ ಸರ್ಕಾರ ಅವರಿಗೆ ಕಾಳಿದಾಸ ಸನ್ಮಾನದ ಪ್ರಶಸ್ತಿಯನ್ನು ನೀಡಿತು.

ಕರ್ನಾಟಕಕ್ಕೆ ಹಿಂತಿರುಗಿದ ಕಾರಂತರು ರಂಗಾಯಣ ರೆಪರ್ಟೋರಿಯನ್ನು ಸೇರಿದರು. ತಮ್ಮ ಅಪಾರ ಅನುಭವದ ಬಲದಿಂದ ರಂಗಾಯಣವನ್ನು ಉತ್ತಮ ಸ್ಥಿತಿಗೆ ಬೆಳೆಸಿದರು. ರಾಷ್ಟ್ರ ಮಟ್ಟದಲ್ಲಿ ಖ್ಯಾತಿ ಪಡೆದಿದ್ದ ಕಾರಂತರಿಗೆ ಅನೇಕ ಪ್ರಶಸ್ತಿಗಳು ದೊರೆತವು. ಕಾರಂತರು ಪ್ರಾದೇಶಿಕ, ಭಾಷೆಗಳ ಇತಿಮಿತಿಗಳನ್ನು ಮೀರಿ ಭಾರತದ ರಂಗಕ್ಷೇತ್ರದಲ್ಲೇ ಒಂದು ದಿಗ್ಗಜರಾದರು. ಅವರ ನಿರ್ದೇಶನದಲ್ಲಿ ಅನೇಕ ಭಾಷೆಗಳಲ್ಲಿ ನಾಟಕಗಳು ರಂಗದ ಮೇಲೆ ಪ್ರಯೋಗ ಕಂಡವು. ಕಾರಂತರು ರಂಗ ಭೂಮಿಯ ಏಳಿಗೆಗೇ ತಮ್ಮ ಜೀವನವನ್ನು ಸಂಪೂರ್ಣವಾಗಿ ಅರ್ಪಿಸಿದ್ದರು.

ಕಾರಂತರಿಗೂ ಮೈಸೂರು ಅಸೋಸಿಯೇಷನ್ನಿಗೂ ಅತಿ ಹಳೆಯ ಗೆಳೆತನ ಮತ್ತು ಸಂಬಂಧ. ಕಳೆದ ವರ್ಷ ನಾವು ಕನ್ನಡದಿಂದ ಹಿಂದಿಗೆ ಅನುವಾದವಾದ 5 ನಾಟಕಗಳ ಬಿಡುಗಡೆಗೆ ಒಂದು ನಾಟಕೋತ್ಸವವನ್ನು ನಡೆಸಿದಾಗ ಅದಕ್ಕೆ ಮುಖ್ಯ ಅತಿಥಿಯಾಗಿ ಕಾರಂತರೇ ಬರಬೇಕೆಂದು ಆಶಿಸಿದ್ದೆವು. ಅವರಿಗೆ ಆಗಲೇ ಸ್ವಾಸ್ಥ್ಯ ಅಷ್ಟು ಚೆನ್ನಾಗಿರಲಿಲ್ಲ. ಬರಲು ಆಗುವುದೋ ಇಲ್ಲವೋ ಎನ್ನುವ ಯೋಚನೆ. ಆದರೆ ಕಾರಂತರು ಒಪ್ಪಿ ಬಂದರು ಮತ್ತು ಆ ಎರಡು ದಿನದ ಉತ್ಸವದಲ್ಲಿ ಎಷ್ಟು ಸಕ್ರಿಯರಾಗಿ ಭಾಗವಹಿಸಿದರೆಂದರೇ ಮುಂಬೈಯಿನ ರಂಗಲೋಕದಲ್ಲೂ, ಎಲ್ಲಾ ಪತ್ರಿಕೆಗಳಲ್ಲೂ ಅವರದ್ದೇ ಚರ್ಚೆಯಾಗಿದ್ದಿತು. ಇದು ಅಸೋಸಿಯೇಷನ್ನಿನ ಸದಸ್ಯರಿಗೆಲ್ಲಾ ಒಂದು ಅವಿಸ್ಮರಣೀಯ ಅನುಭವ.

ಕಾರಂತರ ಅಗಲಿಕೆಯಿಂದ ಭಾರತದ ರಂಗಭೂಮಿಗೆ ತುಂಬಲಾರದ ನಷ್ಟ ಒದಗಿದೆ. ಈ ಸಮಯದಲ್ಲಿ ನಮ್ಮ ಸದಸ್ಯೆಯಾದ ಶ್ರೀಮತಿ ಪ್ರೇಮಾ ಕಾರಂತರಿಗೆ ಈ ಅಗಲಿಕೆಯನ್ನು ತಡೆಯುವ ಶಕ್ತಿಯನ್ನು ಕೊಡಲಿ ಎಂದು ನೇಸರು ಪ್ರಾರ್ಥಿಸುತ್ತದೆ.

\- ಪ್ರಸಾದ್

# ಭಾರತೀಯ ಕಲೆ

ಭಾಗ - 8

> ಭಾರತದಲ್ಲಿ ಚಿತ್ರಕಲೆ ಹಾಗೂ ಶಿಲ್ಪಕಲೆಗಳು ಬಹಳ ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿವೆ. ವಿವಿಧ ಪ್ರಾಂತಗಳಲ್ಲಿ ವಿವಿಧ ಶೈಲಿಗಳು ಬೆಳೆದು ಬಂದಿವೆ. ಓದುಗರಿಗೆ ಭಾರತೀಯ ಕಲೆಯ ಒಂದು ದರ್ಶನವನ್ನು ನೀಡಲು ನಾವು ಶ್ರೀ ಎನ್. ಮರಿಶಾಮಾಚರ್ ಅವರು ಬರೆದಿರುವ ಭಾರತೀಯ ಕಲೆ ಎಂಬ ಪುಸ್ತಕದಿಂದ ಆಯ್ದ ಭಾಗಗಳನ್ನು ನೇಸರುವಿನಲ್ಲಿ ಪ್ರಕಟಿಸುತ್ತಿದ್ದೇವೆ. ಸ್ವತಃ ಕಲಾವಿದ, ಶಿಲ್ಪಿ, ಛಾಯಾಗ್ರಾಹಕರಾಗಿರುವ ಮರಿ ಶಾಮಾಚಾರ್‌ರು ಕಲೆಯ ಕ್ಷೇತ್ರದಲ್ಲಿ ಬಹುಮುಖಿ ಸೇವೆಯನ್ನು ಸಲ್ಲಿಸಿದ್ದಾರೆ ಮತ್ತು ಕಲಾಚಟುವಟಿಕೆಗಳಿಗೆ ಸ್ಫೂರ್ತಿ ತಂದಿದ್ದಾರೆ.

(...ಹಿಂದಿನ ಸಂಚಿಕೆಯಿಂದ)

### ಕೆ.ಜಿ. ಸುಬ್ರಮಣ್ಯನ್

ಭಾರತದ ಸಮಕಾಲೀನ ಕಲೆಯಲ್ಲಿ ಅತ್ಯಂತ ಪ್ರಯೋಗಶೀಲ ಕಲಾವಿದ, ಕಲಾ ಶಿಕ್ಷಣ ತಜ್ಞ, ವಿಚಾರವಂತ ಕಲಾ ಲೇಖಕ, ಭಿತ್ತಿಚಿತ್ರ ರಚನಕಾರ, ಪ್ರಿಂಟ್ ಮೇಕರ್ ಇತ್ಯಾದಿ ಹಲವು ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವವರು ಪ್ರೊ. ಕೆ.ಜಿ. ಸುಬ್ರಮಣಿಯನ್. ಅವರ ಮೊದಲ ಚಿತ್ರಗಳಲ್ಲಿ ಸುಂದರ ಲಿಪಿಯನ್ನು ಡಿಸೈನ್ ಮೇಲೆ Super Impose ಮಾಡಿ, ಘನಾಕೃತಿಯ ವಿಕಾರತೆಯನ್ನು ಸ್ಥಳದಲ್ಲಿ ಅಳವಡಿಸುತ್ತಿದ್ದುದ್ದು. ಉಜ್ವಲ ವರ್ಣಗಳನ್ನು ವಿಸ್ತಾರ ಜಾಗದಲ್ಲಿ ಮೆತ್ತಿ, ಸಂಗೀತಮಯವಾಗಿ ದಪ್ಪನೆಯ ಗೆರೆಗಳನ್ನು ಹೊರರೇಖೆಗಳಾಗಿ ಉಪಯೋಗ ಮಾಡಿದ್ದಾರೆ. ಅವರ ನಂತರದ ಚಿತ್ರಗಳಲ್ಲಿ Khaki Schemeನ್ನು ಉಪಯೋಗ ಮಾಡಿದ್ದು, ಅದರಲ್ಲಿ ಅನೇಕ ರೂಪಾಂತರಗಳನ್ನು ತೋರಿಸಿದ್ದಾರೆ. ಅವರ ಚಿತ್ರಗಳಲ್ಲಿ ವಿನ್ಯಾಸ ಮತ್ತು ಚಿತ್ರದ ರೂಪ ಭಾವ ಅಷ್ಟಾಗಿ ಬದಲಾಗದು. ದುಃಖವನ್ನೇ ಪ್ರತಿಬಿಂಬಿಸಲಿ ಅಥವಾ ತೊಡಕು ತೊಡಕಾದ ಸ್ಟಿಲ್‌ಲೈಫ್‌ನ ಚಿತ್ರಾಲಂಕಾರವೇ ಇರಲಿ, ಅದೇ ರೀತಿಯ ಭಾವನೆಯಲ್ಲಿ ಸ್ಥಳ ವಿನ್ಯಾಸ ಮತ್ತು ಚಿತ್ರದ ರೂಪದಲ್ಲಿ ಅವರು ರಚಿಸಿದ್ದಾರೆ. ಅವರ ಇತ್ತೀಚಿನ ದಿನಗಳಲ್ಲಿ ತೀವ್ರಾಸಕ್ತಿಯುಳ್ಳ, ಧೋರಣೆಯುಳ್ಳ ವಿಡಂಬನೆಯನ್ನು ಕಾಣಬಹುದು.

ಬಂಗಾಲಿ ಕಲಾವಿದರು ಸಾಹಿತ್ಯಕಲೆ ಮತ್ತು ನಿರರ್ಗಳತೆಯನ್ನು ಪಡೆದಿರುವುದರ ಬಗೆಗಿನ ಮನೋಭಾವಕ್ಕಾಗಿ ಅಪರಾಧಿ ಭಾವನೆ ಬೆಳೆಸಿಕೊಂಡರು. ಒಂದು ಹಂತದವರೆಗೆ ಈ ಅಪರಾಧಿ ಭಾವನೆ ಸರಿ. ಆದರೆ ಇವುಗಳು ತಮ್ಮ ಕಲೆಗೆ ಅಡ್ಡಿ ಎಂದು ಅವರು ಒಪ್ಪಿಕೊಳ್ಳಲಿಲ್ಲ. ಇದಕ್ಕೆ ತದ್ವಿರುದ್ಧವಾಗಿ ಇವುಗಳು ತಮ್ಮ ಕಲೆಗೆ ಶೀಲ ಸ್ವಾಭಾವಿಕ ಸಾಂಸ್ಕೃತಿಕ ವೈಶಿಷ್ಟ್ಯತೆಯನ್ನು ಒದಗಿಸಿತು.


ಸ್ವಾತಂತ್ರನಂತರದ ಶೈಲಜ್ ಮುಖರ್ಜಿ, ತನ್ನದೇ ಆದ ದಾರಿಯಲ್ಲಿ ಪ್ರಜ್ವಲವಾದ ವ್ಯಕ್ತಿತ್ವವನ್ನು ಹೊಂದಿರುವ ಶೈಲಜ್ ಮುಖರ್ಜಿ ಸಾಮಾನ್ಯ ಜನರ ಸಾಮಾನ್ಯ ಬದುಕಿನೊಂದಿಗೆ ಮಿಡಿಯುವ ಚೈತನ್ಯ ಪಡೆದಿದ್ದರು. ಅವರ ಸುತ್ತಮುತ್ತ ಕಲಾವಿದರ ಒಂದು ಸಮುದಾಯವೇ ನಿರ್ಮಾಣವಾಗಿ, ಅಕಾಡೆಮಿಸಂನಿಂದ ಸ್ವತಂತ್ರವಾದ ಮತ್ತು ಸಂಪ್ರದಾಯಬದ್ಧವಲ್ಲದ ದಾರಿಯುದ್ದಕ್ಕೂ ಹೋರಾಡುವ ಉದ್ದೇಶವನ್ನು ಅಳವಡಿಸಿಕೊಂಡರು.

ದೆಹಲಿಯಲ್ಲಿ ಕೆಲವು ಗುಂಪುಗಳು ಹುಟ್ಟಿಕೊಳ್ಳುವುದಕ್ಕಿಂತ ಮೊದಲು ನಮ್ಮಲ್ಲಿ ಕೆಲವು ಹಿರಿಯರಿದ್ದರು. ಅವರ ಕೃತಿಗಳು ತಮ್ಮ ಸಮಕಾಲೀನ ಅಥವಾ ಕಿರಿಯರ ಮೇಲೆ ಪ್ರಭಾವ ಬೀರಲಿಲ್ಲ. ಅವರು ಪ್ರಭಾವ ಬೀರಿದ್ದೇ ಆದರೆ ಅದು ತೀರ ಅತ್ಯಲ್ಪ. ಸ್ವಾತಂತ್ರ್ಯ ನಂತರ ನಿಧಾನವಾಗಿ ಉದಯಿಸುತ್ತಿರುವ ಕಲಾಶಾಲೆಗಳು ಮತ್ತು ಇತರ ಸಂಸ್ಥೆಗಳ ಸುತ್ತಮುತ್ತ ನಿಧಾನವಾಗಿ ಕಲಾಜೀವನ ಪ್ರಾರಂಭವಾಯಿತು. ೫೦ರಲ್ಲಿ ಕೇಂದ್ರ ಸರ್ಕಾರದವರು ಲಲಿತ ಕಲಾ ಅಕಾಡೆಮಿಯನ್ನು ಸ್ಥಾಪಿಸದರು. ಇದರಿಂದ ಕಲಾವಿದರಿಗೆ ಸಾಕಷ್ಟು ಪ್ರಯೋಜನವಾಯಿತು.

ಬಿ.ಸಿ. ಸನ್ಯಾಲ, ಕನ್ವಲ್‌ಕೃಷ್ಣ, ಕೆ. ಎಚ್. ಕುಲಕರ್ಣಿಯವರಂಥ ಚಿತ್ರಕಲಾವಿದರು ಮತ್ತು ಧನಪಾಜ್ ಭಗತ್‌ರಂಥ ಶಿಲ್ಪಿಗಳು ಪಾಶ್ಚಿಮಾತ್ಯ ಕಲೆಯ ಭಾವೈಕ್ಯದೊಂದಿಗೆ, ಅವರ ಸಹಜ ಪ್ರತಿಭೆ ಬೆಳೆಸಿಕೊಂಡರು. ದೆಹಲಿ ಕೇವಲ ಸರ್ಕಾರದ ಸ್ಥಳವಾಗಿರದೆ, ನಿಧಾನವಾಗಿ ರಾಷ್ಟ್ರದ ಕಲಾಕೇಂದ್ರವಾಯಿತು. ಹಲವು ಕಲಾವಿದರು ದೆಹಲಿಯಲ್ಲಿ ನೆಲೆಸಿದರು. ಬಿರೇನ್ ಡೇ, ಜೆ. ಸ್ವಾಮಿನಾಥನ್, ಕೃಷ್ಣನ್ ಖನ್ನಾ, ಶಾಂತಿದವೆ, ರಾಮಕುಮಾರ್, ರಾಮಚಂದ್ರ, ಮತ್ತು ಪರಮಜಿತ್‌ಸಿಂಗ್ ಮುಂತಾದವರು ತಮ್ಮ ವೈಯಕ್ತಿಕ ಪ್ರತಿಭೆಯ ಮೂಲಕ ತಮ್ಮ ಸ್ಥಾನವನ್ನು ಉಳಿಸಿಕೊಂಡು ಬಂದರು.

ರಾಮಕುಮಾರನು ಯಾತನೆ ತುಂಬಿದ ಮನುಷ್ಯರು ಮತ್ತು ಜೀವನದ ಆಶಾ ಭಂಗಗಳನ್ನು ಅವರ ಪರಿಸರದೊಂದಿಗೆ ಚಿತ್ರಿಸಿದರೇ ಕೃಷ್ಣನ್ ಖನ್ನಾ ಸಾಮಾಜಿಕ ಆರ್ಥಿಕ ನಂಬಿಕೆಗಳಿಂದ ವಾಸ್ತವ ಶೈಲಿಯ ಮೂಲಕ ರಚಿಸಿದರು. ಉತ್ತಮ ರೇಖಾ ಚಿತ್ರಗಳ ರಚನೆಯತ್ತ ತಿರುಗಿದ ಶಾಂತಿದವೆ ಚಿತ್ರದ ದೇಶಿಯ ಮತ್ತು ಅಸಾಧಾರಣ ವಿನ್ಯಾಸವನ್ನು ರೂಪಿಸಿದರು. ಗಾಯತೊಂಡೆ ವರ್ಣಿಸಲು ಅಸಾಧ್ಯವಾದ ವರ್ಣಸಂಯೋಜನೆ, ದೀರ್ಘ ಚಿಂತನೆಯ ಮೂಲಕ ಪ್ರತಿಭೆಯನ್ನು ಚಿತ್ರಿಸಿದ. ರಾಮೇಶ್ವರ ಬ್ರೂಟಾ ಚಿತ್ರಗಳಲ್ಲಿ ರಾಜಕೀಯ ವ್ಯಂಗ್ಯತೆ, ಸಾಮಾಜಿಕ ಕಳಕಳಿಯನ್ನು ಕಾಣಬಹುದು.

ದಕ್ಷಿಣ ಭಾರತದ ಚಿತ್ರದ ಮತ್ತು ಶಿಲ್ಪಕಲೆ ಹಿತಕರವಾಗಿ ಸ್ಪಂದಿಸುವ ಹೊಸ ಅಲೆಯ ಪ್ರಭಾವದಿಂದ ಇಂದಿನ ಭಾರತೀಯ ಕಲೆಯು ಯಾವುದೇ ಅತ್ಯುತ್ಸಾಹಿಯ ತಪ್ಪಿಸಿಕೊಂಡಿಲ್ಲ. ರಾಷ್ಟ್ರದ ಸ್ವಾತಂತ್ರದಿಂದ ಪ್ರಾರಂಭಿಸಿ ಮೂರು ದಶಕಗಳ ಕಾಲಾವಧಿಯಲ್ಲಿ ಅವಿಚ್ಛಿನ್ನವಾಗಿ ಅಭ್ಯಸಿಸುತ್ತಿರುವ ಕಲಾವಿದರ ಕಲೆಯು ಕಲಾಭಿವೃದ್ಧಿಯಲ್ಲಿ ಪ್ರತಿಯೊಂದು ಅನುಕ್ರಮವಾದ ಹೆಜ್ಜೆಯೂ ಕೂಡ ನೈಜ ಕಲಾ ಸೌಂದರ್ಯದ ಆಂತರಿಕ ಅಗತ್ಯತೆಯಿಂದ ಉತ್ತೇಜಿತಗೊಂಡಿರುತ್ತದೆ ಎನ್ನುವುದನ್ನು ಪ್ರತಿಪಾದಿಸುತ್ತದೆ. ಸಾಮಾನ್ಯವಾಗಿ ಭಾರತದ ಪ್ರಮುಖ ನಗರಗಳ ಕಲಾವಿದರು ದೃಶ್ಯ ಪರಿ ಭಾಷೆಯಲ್ಲಿ ಹೊಸ ವಿಚಾರಗಳಿಗೆ ಮಾನದಂಡವಾಗಿದ್ದಾರೆ. ದಕ್ಷಿಣ ಭಾರತದ ಕಲಾವಿದರು (ಅದರಲ್ಲೂ ವಿಶೇಷವಾಗಿ ಮದ್ರಾಸ್ ಮತ್ತು ಹೈದ್ರಾಬಾದ್) ನಗರಗಳಲ್ಲಿ ಕೆಲಸ ಮಾಡುತ್ತಿರುವ ಕಲಾವಿದರು ತಮ್ಮ ಸಮಸ್ಯೆಗಳೊಂದಿಗೆ ಹೆಣಗಾಡುತ್ತಲೇ ತಮ್ಮ ಗಂಭೀರವಾದ ಖಚಿತವಾದ ಮತ್ತು ಜವಾಬ್ದಾರಿಯುತ ಕಲೆಯ ಮೂಲಕ ದೆಹಲಿ, ಮುಂಬಯಿ ಮತ್ತು ಕಲ್ಕತ್ತಾ ನಗರಗಳ ಕಲಾವಿದರ ಸಾಹಸಗಳನ್ನು ವ್ಯಾಖ್ಯಾನಿಸುವಂತಹ ಅಭಿವ್ಯಕ್ತಿಗಳಿಗಿಂತ ಯಾವಾಗಲೂ ಭಿನ್ನವಾದ ಕಲಾಕೃತಿಗಳು ನಿರ್ಮಾಣವಾದುವು. ಕಲಾಶಾಲೆಯ ಸಾಂಸ್ಥಿಕ ರಚನೆ



*ಗುಲಾಮ್ ಮಹಮ್ಮದ್ ಶೇಕ್*

ಮತ್ತು ಸಾಂಸ್ಥಿಕ ಸೂಚನೆಗಳು ಸುಭಾಕಾಂಕ್ಷಿಗಳಾದ ಕಲಾವಿದರ ಮೇಲೆ ಪರಿಣಾಮಕಾರಿಯಾಗಿವೆ ಎಂದು ಸಿದ್ಧವಾಗುತ್ತದೆ. ಹೈದ್ರಾಬಾದ್ ಕಲಾಶಾಲೆಯ ಮೇಲೆ ಸುಕುಮಾರ್ ದಿವ್ಯಸಕರ್‌ನ ಪ್ರಭಾವ ಮತ್ತು ಕೆ.ಸಿ.ಎಸ್. ಪಣಿಕ್ಕರ್ ಪ್ರಭಾವ ಮದ್ರಾಸ್ ಕಲಾಶಾಲೆಯ ಮೇಲೆ ಆಗಿದ್ದರಿಂದ ಈ

ಕಲಾಶಾಲೆಗಳಿಂದ ಹೊರಬಂದ ಕಲಾವಿದರ ಕೃತಿಗಳು ಪ್ರತ್ಯೇಕತೆಯನ್ನು ತೋರುತ್ತವೆ.

ಇದರ ಪರಿಣಾಮವಾಗಿ ದಕ್ಷಿಣದಲ್ಲಿ ಇಂದು ಅಸಂಖ್ಯಾತ ಕಲಾವಿದರಿದ್ದಾರೆ. ಒಟ್ಟಾಗಿ ಕೆಲಸ ಮಾಡುವ ಕಲಾವಿದರ ಗುಂಪುಗಳಿವೆ. (ಉದಾಹರಣೆಗೆ ಚೋಳಮಂಡ ಕಲಾವಿದರ ಗ್ರಾಮ) ಇವರು ರಾಷ್ಟ್ರೀಯ ಸಮಕಾಲೀನ ಚಳವಳಿಯಲ್ಲಿ ಆಸಕ್ತಿಯಿಂದ ಭಾಗವಹಿಸಿದ್ದರು.

### ಕೆ.ಸಿ.ಎಸ್. ಪಣಿಕ್ಕರ್

ಅವರ ಕಲಾ ಜೀವನ ಹೋರಾಟದ ಬದುಕು. ಆದುದರಿಂದಲೇ ಅವರು ಸಮಕಾಲೀನ ಕಲಾವಿದರಲ್ಲಿ ಪ್ರಮುಖರೆಂದು ಮನ್ನಣೆ ಪಡೆದಿದ್ದು, ತಮ್ಮ ಸೃಜನತೆಯೊಡನೆ ಗಟ್ಟಿಯಾಗಿ ನಿಂತ ಕಲಾವಿದ. ಸೌಂದರ್ಯದ ಪ್ರತಿಪಾದಕರಾದ ಪಣಿಕ್ಕರ್ ತಮ್ಮ ಚಿತ್ರಗಳಲ್ಲಿ ಸೌಂದರ್ಯ ಪ್ರಜ್ಞೆ ಮೂಡಿಸಿದರು. ಅವರ ಕಲಾಭಿವ್ಯಕ್ತಿಯ ಬೆಳವಣಿಗೆಯಲ್ಲಿ ವಿಕಾಸವನ್ನು ಕಾಣಬಹುದು. ನಮ್ಮ ದೇಶದ ಪರಂಪರೆಯೊಂದಿಗೆ ಸಮಕಾಲೀನ ಕಲೆಯನ್ನು ರೂಪಿಸಿಕೊಂಡು ಚಿತ್ರಗಳಲ್ಲಿ ವರ್ಣಸಂಯೋಜನೆ, ತಂತ್ರವಿಧಾನ, ಮಿತವಾದ ಬಣ್ಣಗಳ ಬಳಕೆ ಮತ್ತು ಸಂಯೋಜನೆ, ಇವುಗಳಲ್ಲಿ ಅವರ ವೈಯಕ್ತಿಕ ಮುದ್ರೆಯನ್ನು ಕಾಣಬಹುದು. ಅವರ ಕಲಾಕೃತಿಗಳಲ್ಲಿ ಮನುಷ್ಯರ ಚಿತ್ರಗಳು ಕುಬ್ಜಾಕೃತಿಯಲ್ಲಿರುವುದು, ತಲೆ ದೊಡ್ಡದಾಗಿದ್ದು, ನೀಳವಾದ ಕಣ್ಣುಗಳಿರುತ್ತವೆ. ತಮ್ಮದೇ ಆದ ಶೈಲಿಯನ್ನು ರೂಢಿಸಿಕೊಂಡು ಅವು ಭಾರತೀಯತ್ವಗಳ ಗುಣವನ್ನು ಹೊಂದಿವೆ ಹಾಗೂ ಭಾರತೀಯ ಸಂಸ್ಕೃತಿಯಲ್ಲಿರುವ ಸಂಕೇತ, ಪ್ರತಮೆಗಳು, ಅಲಂಕರಣಗಳ ಅನ್ವೇಷಕ.

ನಾವು ಎಚ್ಚರವಾಗಿರುವುದರಿಂದ, ಚಾರಿತ್ರಿಕ ಮತ್ತು ಸಾಮಾಜಿಕ ಪರಿಸ್ಥಿತಿಯಲ್ಲಿ ತನ್ನನ್ನು ಕಂಡುಕೊಳ್ಳುವ ವಿಚಾರಶೀಲ ಕಲಾವಿದನು ಆ ಪ್ರಕಾರವಾಗಿಯೇ ವರ್ತಿಸುತ್ತಾನೆ. ತನ್ನ ಸ್ಥಿತಿಗೆ ಯೋಗ್ಯವಾದ ಅತಿ ನಿಕಟ ಪ್ರಭಾವದ ಮೂಲದೊಂದಿಗೆ ಸಂಬಂಧಗಳನ್ನು ಸ್ಥಾಪಿಸಲು ಪ್ರಯತ್ನಿಸಿದರು. ಜನಕ್ಕೆ ರಕ್ತಸಂಬಂಧವಾಗಿ ಬಂದ ಸಾಮಾನ್ಯ ಜ್ಞಾನದ ಮೂಲಕ ಕಲಾತ್ಮಕವಾಗಿ ಲಾಭ ನೀಡಲು ತಕ್ಕವಾಗಿರಬೇಕೆಂಬ ಅಂಶವನ್ನು ದಕ್ಷಿಣದ ಕಲಾವಿದರು ಒಪ್ಪಿಕೊಳ್ಳುತ್ತಾರೆ. ಅವರ ಸೌಂದರ್ಯೋಪಾಸನೆಯ ತತ್ವವನ್ನು ಕ್ರಮಗೊಳಿಸುವ ಅಭಿವೃದ್ಧಿಯ ಅಂಶಗಳಾದ ಪರಂಪರೆ ಮತ್ತು ನಾವೀನ್ಯತೆಗಳಿಂದ ಉತ್ತೇಜಿತವಾದಂಥ ಅವನ ಅಂತರಂಗದ ಸಿದ್ಧತೆಯು ಮತ್ತೆ ಹೆಚ್ಚಿನ ಪ್ರಗತಿಪರ ಧ್ಯೇಯವಾದಿ ಕಲಾವಿದರನ್ನು ಪ್ರತ್ಯೇಕಗೊಳಿಸಿತು.

ಹೈದ್ರಾಬಾದ್ ಕಲಾಸಂಘ ಮತ್ತು ಆಂಧ್ರಪ್ರದೇಶ ಲಲಿತಕಲಾ ಅಕಾಡೆಮಿಗಳು ಕಲಾ ಚಟುವಟಿಕೆಗಳಿಗೆ ಸೇವೆ ಸಲ್ಲಿಸಿದವು. ಕಲ್ಪನೆ ಮತ್ತು ಚಟುವಟಿಕೆಗಳಿಗೆ ಕಲಾವಿದರು ಮದ್ರಾಸಿನಲ್ಲಿ ದಕ್ಷಿಣ ಭಾರತದ ಚಿತ್ರಕಾರರ ಸಂಘ, ಚೋಳಮಂಡಳದ ಕಲಾವಿದರು ಹಾಗೂ ಗುಂಪುಗಳಾಗಿ ಪ್ರದರ್ಶನಗಳನ್ನು ನಡೆಸಿದರು. ಸುಲ್ತಾನ ಆಲಿ, ಪಿ.ಟಿ. ರೆಡ್ಡಿ, ಕೆ. ಸಿ. ಎಸ್. ಪಣಿಕ್ಕರ್, ಧನಪಾಲ್ ಮತ್ತು ಕೆ. ಶ್ರೀನಿವಾಸಲುರಂಥ ಹಿರಿಯ ಕಲಾವಿದರ ಕೊಡುಗೆ ಅಪಾರವಾದುದು. ರೆಡಪ್ಪಾ ನಾಯ್ಡು, ಎಸ್. ಜಿ. ವಾಸುದೇವ್, ಲಕ್ಷ್ಮಾಗೌಡ್, ಆದಿಮೂಲಂ, ಸೂರ್ಯಪ್ರಕಾಶರಂಥ ಕಲಾವಿದರ ಸೃಜನಶೀಲತೆ ವಿಶೇಷವಾದುದು.

ಭಾರತದ ಸಮಕಾಲೀನ ಕಲೆಯ ಬಗ್ಗೆ ಯೋಚಿಸುವಾಗ ಚರಿತ್ರೆಯ ಸ್ಥೂಲ ಕಲ್ಪನೆ ಇರಬೇಕಾದ್ದು ಅವಶ್ಯ. ಪಾಶ್ಚಾತ್ಯ ಕಲೆಯ ಬಗ್ಗೆ ಭಾರತೀಯ ಕಲಾವಿದರ ಪ್ರತಿಕ್ರಿಯೆ ಒಂದು ರೀತಿ ಗೊಂದಲದಿಂದ ಕೂಡಿತ್ತು. ಅವರು ಪರಿಸ್ಥಿತಿಗೆ ಅನುಗುಣವಾಗಿ ಕಲೆಯೊಂದಿಗೆ ಬೆಳೆದಿದ್ದಾರೆಯೇ ಹೊರತು ಅದನ್ನು ಸಂಪೂರ್ಣವಾಗಿ ತಮ್ಮದಾಗಿಸಿಕೊಳ್ಳಲು ಅವರಿಂದಾಗಲಿಲ್ಲ. ಸ್ವಾತಂತ್ರ್ಯದ ಮೊದಲ ವರ್ಷದಲ್ಲಿ ಭಾರತೀಯ ಕಲಾವಿದರು ಅಂದಿನ ಅಂತರರಾಷ್ಟ್ರೀಯ ಚಟುವಟಿಕೆಗಳನ್ನು ಉತ್ಸಾಹದಿಂದ ಸ್ವಾಗತಿಸಿದ್ದರು. ಕಾರಣ ಅವರು ಹೊಸ ಮೌಲ್ಯ ಹಾಗೂ ವಿಚಾರಗಳ ಹೊಂದಾಣಿಕೆ ಮತ್ತು ತಮ್ಮ ಗೊಂದಲಗಳಿಂದ ಬಿಡುಗಡೆಯ ಪ್ರಯತ್ನದಲ್ಲಿದ್ದರು. ಆದರೆ ಆಧುನಿಕ ಕಲೆಯೊಡನೆ ಸರಿಸಮನಾಗಿ ಹೋಗಲು ಸಾಧ್ಯವಿಲ್ಲವೆನ್ನುವ ಅರಿವೂ ಅವರಿಗಿತ್ತು. ಸ್ಪರ್ಧಾತ್ಮಕವಾದ ಕಲೆಯ ಮಾರುಕಟ್ಟೆ ಶೀಘ್ರವಾಗಿ ಬದಲಾಗುವ ಕಲೆಯ ಬೆಳವಣಿಗೆಗೆ ಅವರ ಮನೋಭಾವಕ್ಕೆ ಸರಿ ಒಹೊಂದುವುದಿಲ್ಲವೆಂಬುದನ್ನೂ ಅವರು ತಿಳಿದಿದ್ದರು.

ಅಮೂರ್ತಕಲೆ ಭಾರತದಲ್ಲಿ ಹೊಸದಾಗಿದ್ದಾಗ ನ್ಯೂಯಾರ್ಕ್ ಮತ್ತು ಪ್ಯಾರಿಸ್‌ಗಳಲ್ಲಿ ಅದು ಹಳತಾಗಿತ್ತು. ಕ್ರಮೇಣ ಭಾರತೀಯ ಕಲೆ ವಿಸ್ತರಿಸುದುದಲ್ಲದೆ ಇಲ್ಲಿನ ಪರಿಸರದಲ್ಲಿ ಗುಣಮಟ್ಟದಲ್ಲೂ ಬದಲಾಯಿತು. ಭಾರತೀಯ ಕಲಾಪ್ರಪಂಚದ ಗೊತ್ತು, ನಿಲುವುಗಳ ಸ್ವರೂಪ ಮೂಡಿತು.

ಈ ಮಾರ್ಗದಲ್ಲಿ ಬೆಳೆದ ಅರವತ್ತರ ದಶಕದ ಕಲಾವಿದರಿಗೆ ತಮ್ಮ ಅಭಿವ್ಯಕ್ತಿಯ ಬಗೆಗೆ ಆಶೆ ತೀರಾ ಕಡಿಮೆಯಾಯಿತು. ಅವರ ಅಭಿಪ್ರಾಯಗಳು ಪ್ರಾಮಾಣಿಕವಾಗಿ ಪುನರ್‌ಪರಿಶೀಲನೆಗೆ ಒಳಗಾದವು. ಇಪ್ಪತ್ತನೆಯ ಶತಮಾನದ ಮೊದಲ ದಿನಗಳಿಂದಲೂ ಇವರು ಸಾಂಪ್ರದಾಯಿಕ, ಆಧುನಿಕ ಭಾರತೀಯ ಮತ್ತು ಪಾಶ್ಚಿಮಾತ್ಯ ರೀತಿಯಲ್ಲಿ ಚಿತ್ರಿಸುವುದನ್ನು ಮುಂದುವರಿಸಿದ್ದರು. ಕಲೆಯ ಬಗ್ಗೆ ಪ್ರಪಂಚದಾದ್ಯಂತ ಹೆಚ್ಚಿನ ಪ್ರಕಟಣೆಗೆ ಅವಕಾಶ ಮತ್ತು ಕಲಾಪ್ರದರ್ಶನಗಳು ಕಾರಣವಾಗಿ ಇವರ ದೃಷ್ಟಿ ವಿಶಾಲವಾಗಿ, ಇದರಿಂದ ಆಗಿನ ಪರಿಸರವನ್ನು ವಿವೇಚಿಸಲು ಸಾಧ್ಯವಾಯಿತು.

ಇದು ಅನೇಕ ಹೊಸ ಅನ್ವೇಷಣೆಗಳಿಗೆ ಮೂಲವಾಯಿತು ಆತ್ಮ ಸಂಶೋಧನೆಯ ಮತ್ತು ತನ್ನತನವನ್ನು ಕಂಡುಕೊಳ್ಳುವ ಸಮಯವಾಯಿತು. ಸ್ಪಷ್ಟವಾದ ಅಂಶಗಳಲ್ಲಿ ಒಂದೆಂದರೆ, ಭಾಷೆ ಮತ್ತು ಸೃಜನಶೀಲತೆಯ ನಡುವಿನ ಸಂಬಂಧ, ಪೂರ್ವಜರಿಗೆ ಭಾಷೆ ಒಂದು ಮುಖ್ಯ ಸಂವಾದ ಭಾಗವಾಗಿತ್ತು. ಉಳಿದವುಗಳೆಲ್ಲ ಅದಕ್ಕೆ ಅಸಾಹಯಕವೆಂದು ಪರಿಗಣಿಸಲ್ಪಟ್ಟಿದ್ದವು. ಈಗ ಕಲಾವಿದನು ದೃಶ್ಯ ಭಾಷೆಯು ಆಕೃತಿಯ ಉಚ್ಚಾರಣೆ ಮತ್ತು ಸ್ಪರ್ಶದ ಅನುಭವವನ್ನು ಕೊಡಬಲ್ಲದು ಎಂದು ತಿಳಿದುಕೊಳ್ಳತೊಡಗಿದನು. ಅವನ ವಿಚಾರಗಳಲ್ಲೂ ಬದಲಾವಣೆಯಾಗಿ ಅಮೂರ್ತ ಕಲೆಯಿಂದ ಸ್ಪಷ್ಟ ಆಕೃತಿಗೆ ಪುನರುಜ್ಜೀವನ ನೀಡಿತು. ಇದು ಕಲೆಯ ಪ್ರಮುಖ ಪಾಶ್ಚಾತ್ಯ ಮಾದರಿಗಳ ನಿರ್ಗಮನಕ್ಕೂ ಕಾರಣವಾಯಿತು.

ಭಾರತೀಯ ಕಲಾವಿದರು ಕೈಬಿಟ್ಟ ಪಾಶ್ಚಾತ್ಯ ಮಾದರಿಗಳ ಸ್ಥಾನದಲ್ಲಿ ಸಾಂಪ್ರದಾಯಿಕ, ಭಾರತೀಯ ಕಲೆಯ ಸಂಶೋಧನೆ ಪ್ರಾರಂಭವಾಯಿತು. ಪಾಶ್ಚಾತ್ಯ ಕಲೆಯ ನಿರ್ಗಮನದಿಂದ ಭ್ರಮನಿರಸನಗೊಂಡ ಕೆಲವು ಕಲಾವಿದರು ಸಂಪ್ರದಾಯವನ್ನು ಆಶ್ರಯಿಸಿದರು. ಇಲ್ಲಿಂದ ತಂತ್ರಕಲೆಯ ಆರಂಭವನ್ನು ಗಮನಿಸಹುದು. ಆಳವಾಗಿ ಬೇರುಬಿಟ್ಟ ಪಾಶ್ಚಾತ್ಯ ವಿಚಾರಗಳನ್ನು ಸುಲಭವಾಗಿ ಕೈಬಿಡುವುದು ಕಷ್ಟ ಎಂದು ಬಾವಿಸಿ ಎರಡು ಮಾದರಿಯ ಕಲೆಗಳನ್ನು ಮಿಶ್ರಗೊಳಿಸಿ ಚಿತ್ರ ರಚಿಸಿದ ಪ್ರಯತ್ನಗಳನ್ನೂ ಕಾಣಬಹುದು. ಈ ಹಾದಿಯನ್ನು ಅನುಸರಿಸಿದ ಜೆ. ಸ್ವಾಮಿನಾಥನ್ ಮೊದಲು ಪುರಾತನ ಮೂಲಗಳಿಂದ ಚಿತ್ರಿಸಿದರೂ ಅನಂತರ ಹಿಂದೂ ಧರ್ಮದ ಆಧ್ಯಾತ್ಮಿಕತೆಯನ್ನು ಅನುಸರಿಸಿ ಚಿತ್ರಗಳನ್ನು ರಚಿಸಿರುವುದಾಗಿ ಹೇಳುತ್ತಾರೆ.

ಇವರ ಸಮಕಾಲೀನರು ನೇರವಾಗಿ ತಾಂತ್ರಿಕ ಕಲೆಯಿಂದ ಮತ್ತು ರೇಖಾ ಚಿತ್ರಗಳಿಂದ ಸ್ಫೂರ್ತಿ ಪಡೆದವರು. ಇವರಲ್ಲಿ ಮುಖ್ಯರಾದವರು ಬಿರೇನ್ ಡೇ, ಜಿ.ಆರ್. ಸಂತೋಷ್ , ಕೆ. ಸಿ. ಎಸ್. ಪಣಿಕ್ಕರ್. ಇವರುಗಳು ತಾಂತ್ರಿಕ ಕಲೆಯ ಮೂಲ ಉದ್ದೇಶ ಮತ್ತು ಸಂಕೇತಗಳನ್ನು ಸ್ವಲ್ಪ ಅಮೂರ್ತತೆ ಮತ್ತು ಶೈಲಿಯುಕ್ತ ಚಿತ್ರಗಳೊಂದಿಗೆ ಸಂಯೋಜಿಸಿ, ತಾಂತ್ರಿಕ ಕಲೆಯನ್ನು ಆಧುನಿಕರಿಸುವಲ್ಲಿ ಯಶಸ್ವಿಯಾದರು. ಪಾಪ್ ಕಲ್ಪನೆಯಿಂದ ಸ್ಫೂರ್ತಿ ಪಡೆದು ವಿಲಕ್ಷಣ ದೃಶ್ಯಗಳನ್ನು ರಚಿಸಿದರು. ಅನಂತರ ಅಣುಚಿತ್ರಗಳಿಂದ ನಿಜ ಮತ್ತು ಮಿಥ್ಯೆಗಳನ್ನು ಉಪಯೋಗಿಸಿಕೊಂಡು ಮಧ್ಯಮ ವರ್ಗದ ವಿಷಯಗಳನ್ನು ತೆಗೆದುಕೊಂಡು ನಾಟಕೀಯವಾಗಿ ಚಿತ್ರ ರಚಿಸಿದರು.

ಸ್ವಾಮಿನಾಥನ್, ಜೆರನ್‌ಪಟೇಲ್, ಗುಲಾಂ ಮಹಮ್ಮದ್ ಷೇಕ್, ಹಿಮ್ಮತ್ ಷಾ ಈ ಕಲಾವಿದರು ಸುಪ್ತ ಪ್ರಜ್ಞೆಯ ಪ್ರಾಮುಖ್ಯತೆ ಮತ್ತು ಅದರಿಂದಾಗಿ ಕಲೆಯಲ್ಲಿ ಸಹಜತೆ ಮತ್ತು ಸಮಯಸ್ಫೂರ್ತಿ ಎಂಬ

ಒಂದು ಮೂಲ ಭಾವನೆಯನ್ನು ಚಿತ್ರಿಸಿ, ಸುಪ್ತಪ್ರಜ್ಞೆಯ ತತ್ತ್ವವು ಪ್ರಾಮುಖ್ಯತೆಯನ್ನು ಪಡೆಯಿತು. ಭಾವನಾತ್ಮಕ ಮಟ್ಟದಲ್ಲಿ ದೇಶಿಯತೆಯ ಕಡೆಗೆ ತಿರುಗಿದ್ದಾಗಲೀ ಮತ್ತು ನಿಗೂಢ ಪ್ರಜ್ಞೆಯ ತತ್ವದ ಅಳವಡಿಕೆಯಾಗಲೀ, ಆಕಸ್ಮಿಕವಲ್ಲ. ಅವೆರಡೂ ಏಕಕಾಲದಲ್ಲಿ ಸಂಭವಿಸಿರಬೇಕು. ಸುಪ್ತಪ್ರಜ್ಞೆಯು ವಹಿಸಿದ ಪಾತ್ರದ ಮೇಲೆ ಭಾರತೀಯ ಸಂಪ್ರದಾಯ ಮತ್ತು ನಿಗೂಢಪ್ರಜ್ಞೆಯ ನಡುವಿನ ಮನೋಭಾವಗಳ ಅದ್ಭುತ ಸಮನ್ವಯವಿದೆ. ಸಾಂಪ್ರದಾಯಿಕ ಭಾರತೀಯ ಸಂಸ್ಕೃತಿಯು ತನ್ನ ಪ್ರಾಚೀನ ಮೂಲಗಳಿಂದ ಹರಿಯುವಂಥ ಪ್ರವಾಹಕ್ಕೆ ಪುರಾಣ ಮತ್ತು ಐಂದ್ರಜಾಲಿಕ ಪ್ರಪಂಚದ ಮೂಲಕ ಅರಿಯದ ಲೋಕಕ್ಕೆ ವ್ಯಕ್ತಿಯನ್ನು ಕೊಂಡೊಯ್ಯಲು ಪ್ರೇರೇಪಿಸುತ್ತದೆ. ಹೀಗೆ ಹಿಂದೂ ಅಧ್ಯಾತ್ಮಶಾಸ್ತ್ರವು ವೈಚಾರಿಕತೆಗಿಂತ ಅಂತರ್‌ದೃಷ್ಟಿ ಮತ್ತು ಅನುಭೂತಿ ಶಕ್ತಿಗೆ ಉನ್ನತ ಸ್ಥಾನವನ್ನು ನೀಡಿತು. ಸಮರ್ಥ ಯೋಗಿನಿಯು ಭಾವೋದ್ರೇಕಗಳ ಸಾರವನ್ನು ಸಂಗ್ರಹಿಸಿ, ಅದರ ಸ್ವರೂಪವನ್ನು ಮಾರ್ಪಡಿಸಬೇಕು. ಅದು ಸುಪ್ತಪ್ರಜ್ಞೆಯ ತೋರಿಕೆಯ ಜಡಸ್ಥಿತಿಯನ್ನು ಹೊಂದಿರುವ ಅವನ ಹಾಗೂ ಸಮುದಾಯದ ಮೂಲಕ ಅವನು ಶುದ್ಧೀಕರಣದ ವ್ಯಾಪಕ ಮತ್ತು ಸೂಕ್ಷ್ಮ ರೂಪಗಳನ್ನು ಪಡೆಯಲು ಮಾರ್ಗದರ್ಶಿಯಾಗಿದೆ.

ನಾವು ನಿಗೂಢ ಪ್ರಜ್ಞೆಯ ಗುಂಪಿಗೆ ಸೇರಿಸುವಂಥ ಭಾರತೀಯ ಕಲಾವಿದರ ಒಲವು, ಪ್ರಭಾವಂತಿಕೆಯು ಸಾಂಸ್ಕೃತಿಕ ಧಾರೆಯು ರೂಪವನ್ನು ವಿಸ್ತರಿಸಿದೆ. ಅತೀಂದ್ರಿಯವಾದಲ್ಲಿ ಆಸಕ್ತಿಯಿದ್ದು, ರಹಸ್ಯ ಶೃಂಗಾರ ಪದ್ಧತಿಯಲ್ಲಿ ಮತ್ತು ಪ್ರಕೃತಿ ರಹಸ್ಯವಾದದ ರೂಪಗಳಲ್ಲಿ ಸಂಪ್ರದಾಯವನ್ನು ಪರೀಕ್ಷಿಸುವಂತೆ ಮಾಡುವ ಮಾನಸಿಕ ಪದ್ಧತಿಗೆ ತೀರಾ ಗಮನಾರ್ಹವಾಗಿ ಹರಿದಿದೆ. ಅತೀಂದ್ರಿಯವಾದಿಗಳ ಒಲವನ್ನು ತೃಪ್ತಿಗೊಳಿಸುತ್ತಾ, ಪ್ರತಿಮೆಗಳು, ನಿಗೂಢ ಮತ್ತು ಅಮೂರ್ತವನ್ನು ಬಯಸುವುದರಿಂದ ಸಮಕಾಲೀನ ಕಲಾವಿದರಿಗೆ ತಾಂತ್ರಿಕತೆಯ ವಿದ್ಯೆಯು ವಿಶೇಷವಾಗಿ ಆಕರ್ಷಿಸಿತು. ೧೯೭೦ರ ಆದಿ ಭಾಗದಲ್ಲಿಯ ನವ್ಯ ತಾಂತ್ರಿಕತೆಯು ಅತೀಂದ್ರಿವಾದಿಗಳ ಪುನರುಜ್ಜೀವನದ ವಿಶಿಷ್ಟ ಲಕ್ಷಣಗಳನ್ನು, ಗೂಢ ಅಂತರ್ಭಾವದ ರಚನೆ ಲೈಂಗಿಕ ವಿಲಕ್ಷಣ ಗುಣವನ್ನು ಪ್ರದರ್ಶಿಸಿತು.

ಮೂಲ ತಾಂತ್ರಿಕ ಕಲಾವಿದರಿಗೆ ತಮ್ಮ ಸಾಂಕೇತಿಕ ಅರ್ಥದೊಂದಿಗೆ ವರ್ಣದ ಹಿನ್ನೆಲೆ ಮತ್ತು ಪ್ರತೀಕಗಳ ಪ್ರಾದೇಶಿಕ ಮನೋಧರ್ಮಗಳು ಮುಖ್ಯವಾಗಿದ್ದು, ದೇಶೀಯ ವಿನ್ಯಾಸದ ಆಧಾರದ ಮೇಲೆ ಚಿಂತನೆಯನ್ನು ಆಹ್ವಾನಿಸಿದೆ. ಅತ್ಯಂತ ಕ್ರಮಬದ್ಧವಾದ ಗ್ರಹಿಕೆಯಿಂದ ಸಮಕಾಲೀನ ಕಲಾವಿದರು ಕೆಲವು ಅನುಕೂಲಕ್ಕಾಗಿ ತಂತ್ರವನ್ನು ಬಳಸಿಕೊಂಡರು. ಕೆ.ಸಿ. ಎಸ್. ಫಣಿಕ್ಕರ್ ಖಗೋಳವಿಜ್ಞಾನದ ರೇಖಾಪಟಗಳ ಮತ್ತು ಗ್ರಹಕುಂಡಲಿಗಳ ರೀತಿಯು ಅರೆ ಆಧ್ಯಾತ್ಮಿಕ ಭಾವನೆಯೊಂದಿಗೆ ದೃಶ್ಯ ಸಂಕ್ಷಿಪ್ತತೆಯಿಂದ ಮೂಲಪ್ರತಿ ಮತ್ತು ಸಂಕೇತಗಳ ಮೇಲೆ ಅಸ್ಪಷ್ಟವಾಗಿ ಬರೆಯುವಿಕೆಯನ್ನು ಸಿದ್ಧಿಸಿಕೊಂಡಿದ್ದಾರೆ. ಮದರಾಸಿನಲ್ಲಿರುವ ಅವರ ಅನುಯಾಯಿಗಳು ಅಲಂಕಾರದ ಮೂಲಕ ಇದನ್ನು ಬಹಳ ಕಡೆ ಉಪಯೋಗಿಸಿದ್ದಾರೆ. ಬಾರ್ವೆ ಮತ್ತು ಮಂಜಿತ್‌ಬಾವಾರಂತಹ ಕಲಾವಿದರು, ತಂತ್ರದಲ್ಲಿನ ಆಕರ್ಷಕ ಅಂಶವನ್ನು ತೆಗೆದುಕೊಂಡು, ಅದಕ್ಕೆ ಭ್ರಮೆಯ ವಿಶಾಲ ಹರಹನ್ನು ತುಂಬಿದರು.

ಸಾಮಾನ್ಯವಾಗಿ, ಯಾವುದೇ ಅಂಗೀಕೃತ ಸಾಂಸ್ಕೃತಿಕ ಪದ್ಧತಿಯಲ್ಲಿ ಗಹನವಾದ ಮತ್ತು ಶೃಂಗಾರದ ನಡುವೆ ಕೊಳ್ಳುಕೊಡುವ ಪ್ರತೀಕಗಳಿವೆ, ಬಹು ಸಂಖ್ಯೆಯ ಸಮಕಾಲೀನ ಕಲಾವಿದರು ಪ್ರಮುಖವಾಗಿ ಅಂಟಿಕೊಂಡಂಥ ಶಿಶ್ನಪ್ರತಿಮಾ ಕಲ್ಪನೆಯು ಪ್ರಧಾಮಮೂಲ ತಾಂತ್ರಿಕ ವಿದ್ಯೆಯಾಗಿದೆ. ಲಿಂಗ ಪ್ರತೀಕವು ಕಾಮದ ರೂಪವಾಗಿದೆ ಮತ್ತು ಮಾನಸಿಕ ಅವೇದನೀಯತೆ ಮತ್ತು ಸ್ವಪ್ರತಿಷ್ಠೆಯನ್ನು ಕೊಡಲು ಸಹಾಯಕವಾಗಿದೆ. ಜೇರಮ್ ಪಟೇಲ್ ಭಯವನ್ನು ಹುಟ್ಟಿಸುವ ಮತ್ತು ಬುದ್ಧಿವಿಕಲ್ಪತೆಯನ್ನು ಹೋಲುವ ಛಿದ್ರಛಿದ್ರಗೊಂಡ ಹೆದರಿಕೆಯನ್ನು ಬೆಳೆಯಿಸಿದರು. ಲಕ್ಷ್ಮಾಗೌಡ ಗಣನೀಯ ಕಲಾತ್ಮಕ ಸಮಗ್ರತೆಯನ್ನು ತೋರಿಸಿದರು. ಕಾಮಕೇಳಿಯ ಸಮೃದ್ಧತೆಯ ಶಿಶ್ನಪ್ರತಿಮೆಗಳು ಅತಿ ಸೂಕ್ಷ್ಮ ಪ್ರಜ್ಞೆಯಲ್ಲಿ ಮಾನವೀಯವಾಗಲು ಪರಿವರ್ತನೆಗೊಂಡಿತು. ಇವರು ಶಾಸ್ತ್ರೀಯ ಸೂಕ್ಷ್ಮತೆಯೊಂದಿಗೆ ನಿಜವಾದ ಶೃಂಗಾರ ಭಾವದಿಂದ ಕೂಡಿದೆ ಹಾಗೂ ಪ್ರೇಮಿಗಳ ಪರಸ್ಪರ ಸಂಬಂಧವನ್ನು ತನ್ನದೇ ಆದ ವ್ಯಕ್ತಿತ್ವದಿಂದ ಚಿತ್ರಿಸಿದ್ದಾರೆ.

ಮನುಷ್ಯ ಮತ್ತು ನಿಸರ್ಗದ ನಡುವಿನ ವ್ಯವಹಾರದ ವಿಧಾನಗಳನ್ನು ಅರಿಯುವ ಭಾರತೀಯ ಕಲಾವಿದರಿಗಾಗಿ ಭಾರತೀಯ ಚಿಕಣಿ ಚಿತ್ರಗಳು, ರೂಪಕಗಳ ಅತ್ಯದ್ಭುತ ವಿನ್ಯಾಸವನ್ನು ನೀಡಿವೆ ಮತ್ತು ಚಿತ್ರರಚನೆಗಳ ಶ್ರೇಣಿಯ ಬಾರತೀಯ ಜೀವನ ಹಾಗೂ ಭೂದೃಶ್ಯಗಳ ನಡುವಿನ ಒಡಂಬಡಿಕೆಯನ್ನು ಅಭಿವ್ಯಕ್ತಿಸಿವೆ. ಅದು ಮಾನವನನ್ನು ಯಥಾವತ್ತಾಗಿ ಸ್ಪಂದಿಸಿವೆ ಹಾಗೂ ಅನೇಕ ಬಾರಿ ಪ್ರಕೃತಿಯ ಮಾನವನ ಭಾವನೆಗೆ, ವಿಶೇಷವಾಗಿ ಶೃಂಗಾರ ಭಾವನೆಗೆ ಜೊತೆಗೂಡಿ ಬರುವ ರೂಪಕವಾಗುತ್ತದೆ. ಚಿಕಣಿ ಚಿತ್ರಗಳಲ್ಲಿನ ಭೂದೃಶ್ಯಗಳು ಸಾಮಾನ್ಯವಾಗಿ ಅಲಂಕಾರಿಕವಾದುದು. ನಮ್ಮ ಚಿತ್ರಾತ್ಮಕ ರಚನೆಯಲ್ಲಿ, ವಿಶೇಷವಾಗಿ ಬಣ್ಣದ ಬಳಕೆಯಲ್ಲಿ ಸಮಕಾಲೀನತೆಯ ಅಳವಡಿಕೆಯಿಂದ ಗುಲಾಂ ಮಹಮ್ಮದ್ ಷೇಕ್ ನೇರವಾಗಿ ಚಿಕಣಿ ಚಿತ್ರಗಳನ್ನು ಬಳಸಿಕೊಂಡು ಸಂಕೇತಗಳ ಮೂಲಕ ಕತೆಯನ್ನು ವಿವರಿಸುವ ಗುಮ ಹಾಗೂ ವೈಯಕ್ತಿಕ ಸ್ಮರಣೆಯ ರಚನೆ ಕಾಣಬಹುದು. ಮೊಘಲ್ ಚಿಕಣಿ ಚಿತ್ರಗಳಲ್ಲಿ ಕಂಡುಬರುವ ದೊಡ್ಡದಾಗಿ ಹರಡಿರುವ ವೃಕ್ಷದ ಪ್ರತಿಕೃತಿಯು ಅಲ್ಲಿ ಇಡೀ ಪ್ರಪಂಚದ ಅಲೌಕಿಕ ಸೃಷ್ಟಿಯಾಗಿದೆ ಮತ್ತು ಅವರ ಬಾಲ್ಯದ ಹಳ್ಳಿಯ ನೆನಪುಗಳನ್ನು ಚಿತ್ರಿಸಿದ್ದಾರೆ.

ಜೆ. ಸ್ವಾಮಿನಾಥನ್ ಆದಿಕಾಲದ ಮತ್ತು ಆತಂತ್ರಿಕ ಅತಿನಿಯಮ ಬದ್ಧತೆಯಿಂದ ಸ್ವಲ್ಪಮಟ್ಟಿಗೆ ಭಿನ್ನಮಾರ್ಗದಿಂದ ಬಂದವರು. ಆದರೆ ಅಭೌತ ತತ್ವದಲ್ಲಿ ಪ್ರಕೃತಿ ಆಧ್ಯಮಾತ್ಮಯೋಗವೆಂದು, ಭೂದೃಶ್ಯದ ಘಟಕಾಂಶಗಳಿಗೆ ಪ್ರತಿಮೆಗಳು ಗುಂಪು ಮೇಲ್ನೋಟಕ್ಕೆ ಹೋಲುತ್ತದೆ. ಪ್ರಕೃತಿಯಲ್ಲಿ ಅದನ್ನು ಬಿಂಬಿಸಿ ಭೂದೃಶ್ಯವನ್ನು ಶೋಭಿಸುವಂತೆ ಚಿತ್ರಿಸಿದ್ದಾರೆ. ವರ್ಣಕ್ಷೇತ್ರವು ನೈಸರ್ಗಿಕ ಗುಣವನ್ನು ಹೊಂದಿದ್ದು, ಮರ, ಹಕ್ಕಿ ಹಾಗೂ ಬೆಟ್ಟಲು ಸ್ಫೂರ್ತಿಗೊಂಡ ಕಲ್ಪನಾರಾಜ್ಯದಲ್ಲಿ ರೂಪಕಗಳಂತೆ ತೇಲುವ ಅಲಂಕಾರಿಕ ಸ್ಥಳದಲ್ಲಿ ತೇಲುತ್ತದೆ.

ರಾಜಕೀಯ ಪರಿಸ್ಥಿತಿಯನ್ನು ಬಿಂಬಿಸುವಂಥ ಭಾರತೀಯ ಚಿತ್ರಕಲಾವಿದರು ತುಲನಾತ್ಮಕವಾಗಿ ವಿರಳ. ಆದರೆ ಈಚಿಗಿನ ಹಲವು ಚಿತ್ರಕಲಾವಿದರು ಸಾಕಷ್ಟು ಜಾಗ್ರತರಾಗಿದ್ದಾರೆ ಮತ್ತು ಭಾರತದ ಸಾಮಾಜಿಕ ಸ್ಥಿತಿಯ ಮಟ್ಟದ ಬಗ್ಗೆ ಸ್ವಲ್ಪ ಮಟ್ಟಿಗೆ ಚಿತ್ರಿಸಿದ್ದಾರೆ. ಕೃಷ್ಣನ್ ಖನ್ನ ತಮ್ಮ ಚಿತ್ರಗಳಲ್ಲಿ ಸಾಮಾಜಿಕ ಮತ್ತು ಅದರ ಬಲಿಪಶುಗಳನ್ನು ವಿವರಿಸುತ್ತಾರೆ. ಸಾಮಾಜಿಕ ಹಿಂಸೆಯನ್ನು ಚಿತ್ರಿಸುವುದು ಕೆಲವು ಕಲಾವಿದರ ಆಯ್ಕೆ ಆಗಿತ್ತು. ಸತೀಶ್ ಗುಜ್ರಾಲ್ ನಿರಾಶ್ರಿತರ ನೋವನ್ನು ಚಿತ್ರಿಸಿದರೇ, ರಾಮಕುಮಾರ್ ನಗರ ಕಾರ್ಮಿಕರಲ್ಲಿನ ಭಯವನ್ನು ಚಿತ್ರಿಸಿದರು. ಕೆಲವು ಅಭಿವ್ಯಕ್ತಿವಾದಿಯಾಗಿ ಕಾರ್ಯ ಪ್ರಾರಂಭಿಸಿದ ನಳಿನ ಮಲ್ಹಾನಿ ವಾಸ್ತವಿಕತೆಯಲ್ಲಿ ಭಾರತೀಯ ನಾಗರಿಕ ಮಹಿಳೆಯನ್ನು ಸ್ವಯಂ ಅರಿವಿನ ವಿವಿಧ ಕೋನಗಳಿಂದ ಕಂಡು, ಮಹಿಳೆಯ ಪರಾಧೀನ ವ್ಯಕ್ತಿತ್ವನ್ನು ಸಮರ್ಥಿಸಲು ನಿಬಿಡವಾದ ಮಾನಸಿಕ ಜಾಲವನ್ನು ಹೆಣೆದಿದ್ದಾರೆ. ಅವರು ಮಧ್ಯಮವರ್ಗದ ಕುಟುಂಬವನ್ನು ಆಯ್ಕೆ ಮಾಡಿಕೊಂಡು ಅತಿ ಸಂಕೀರ್ಣ ವಿವರಣೆ ನೀಡುತ್ತಾರೆ. ಭಿಕಾಸ ಭಟ್ಟಾಚಾರ್ಯ, ಅರ್ಪಿತಾಸಿಗಂ, ಗಣೇಶ ಪೈನ್ ಇವರ ಕೃತಿಗಳಲ್ಲಿ ಸರ್‌ರಿಯಲಿಸಂ ಮತ್ತು ಪ್ಯಾಂಟಸಿಯ ಧೋರಣೆ, ಕಲ್ಪನೆಯನ್ನು ಚಿತ್ರಿಸಿದ್ದಾರೆ.

ಸ್ವತಂತ್ರ ಭಾರತದ ಚರಿತ್ರೆಯಲ್ಲಿ ಈ ಕ್ಷೇತ್ರ ಹೆಚ್ಚು ವಿಸ್ತಾರವಾಗಿದ್ದು, ಕಲಾವಿದರು ಮತ್ತು ಕಲಾಶಾಲೆಗಳ ಸಂಖ್ಯೆ ಹೆಚ್ಚಾಯಿತು. ಪ್ರಮುಖ ನಗರಗಳಲ್ಲಿ ಆರ್ಟ್ ಗ್ಯಾಲರಿಗಳು ಸ್ಥಾಪಿತವಾಗಿ ಹಾಗೂ ವಸ್ತುಸಂಗ್ರಹಾಲಯಗಳಲ್ಲಿ ಸಮಕಾಲೀನ ಕಲೆಗೆ ಪ್ರಾಮುಖ್ಯತೆ ನೀಡಲಾಯಿತು. ಪ್ರಪಂಚದ ವಿವಿಧ ಕಲಾ ಪ್ರಕಾರಗಳ ಬಗ್ಗೆ ಅನೇಕ ಭಾರತೀಯ ಕಲಾವಿದರು ಎಚ್ಚೆತ್ತಿದ್ದಾರೆ. ಅನೇಕ ಜನ ಕಲಾವಿದರು ವಿದೇಶಗಳಿಗೆ ಹೋದಾಗ, ಇಲ್ಲವೆ ವಿದೇಶಿ ಕಲಾವಿದರು ನಮ್ಮಲ್ಲಿಗೆ

ಬಂದಾಗ ಅವರನ್ನು ಮುಖತಃ ಭೇಟಿ ಮಾಡಿ, ಕಲೆ ಬಗ್ಗೆ ಚರ್ಚಿಸುತ್ತಿದ್ದಾರೆ. ಕಲಾಪ್ರದರ್ಶನಗಳನ್ನು ವಿನಿಮಯ ಮಾಡಿಕೊಂಡು ಗಮನಾರ್ಹವಾದ ಮಾತುಕತೆಗಳಿಂದ ತಮ್ಮ ಯೋಗ್ಯತೆಯನ್ನು ಗುರುತಿಸಿಕೊಂಡಿದ್ದಾರೆ. ಎಷ್ಟೇ ಸಣ್ಣ ಬಾಂಧವ್ಯವಾಗಲಿ ಅಥವಾ ಕಲಾಪ್ರದರ್ಶನಗಳಿಂದ ನಮ್ಮ ಕಲಾವಿದರ ನಡವಳಿಕೆಯಲ್ಲಿ ಸೂಕ್ಷ್ಮಾಭಿರುಚಿ ಉಂಟಾಯಿತು.

ಭಾರತೀಯ ಸಮಕಾಲೀನ ಕಲೆಯಲ್ಲಿ ಮುಖ್ಯವಾಗಿ ಕರ್ತೃತ್ವಕ್ಕೆ ಬೆಲೆ ಕೊಡಲಾಗಿದೆ. ಕಾರಣ ನಮ್ಮ ತಿಳುವಳಿಕೆಯ ವ್ಯಾಪ್ತಿಯನ್ನು ಅಧಿಕಗೊಳಿಸಿದೆ. ಕೆಲವು ಚಿತ್ರಗಳು ಸಾಂಪ್ರದಾಯಿಕ ಹಿನ್ನೆಲೆಯನ್ನು ಒಳಗೊಂಡಿವೆ. ಹೀಗೆ ಪಾಶ್ಚಾತ್ಯೀಕರಣ ಮತ್ತು ಭಾರತೀಕರಣ ನಮ್ಮ ಕಲೆಯ ಎರಡು ಮುಖ. ಈ ಎರಡು ದೃಷ್ಟಿಗಳಲ್ಲಿ ಹೊಸದೇನು ಇಲ್ಲದಿದ್ದರೂ ಕೃತಿಯಲ್ಲಿ ಹೊಸತನವಿದೆ. ಕಾರಣ ಕಲಾಮಾಧ್ಯಮದಲ್ಲಿ ಇಂದಿನದು, ಹಿಂದಿನದರ ಪುನರಾವರ್ತಿಯಾಗಿರಬೇಕಾಗಿಲ್ಲ.

ಪ್ರತಿಯೊಬ್ಬ ಕಲಾವಿದನು ತನ್ನದೇ ಆದ ಸ್ವಂತ ಪ್ರಪಂಚದ ಸೃಷ್ಟಿಯಲ್ಲಿ ಆಸಕ್ತನಾಗಿದ್ದು, ವೈಯಕ್ತಿಕ ಭಾವನೆಗಳನ್ನು ಎತ್ತಿಹಿಡಿಯುತ್ತಿದ್ದಾನೆ. ಅವನ ಕೃತಿಗಳಲ್ಲಿ ಉಪಯೋಗಿಸುತ್ತಿರುವ ವರ್ಣಗಳಲ್ಲಿ ಮತ್ತು ಅದರ ಸಂಬಂಧಗಳಲ್ಲಿ, ಆಕಾರಗಳಲ್ಲಿ ಮತ್ತು ಸಲಕರಣೆಗಳ ವ್ಯವಸ್ಥೆಯಲ್ಲಿ ಆಸಕ್ತನಾಗಿದ್ದು, ಹೊಸ ವಾಸ್ತವಿಕತೆ, ಹೊಸ ಕಲ್ಪನಾಲೋಕದ ಸ್ಥಿರ ಗುರಿ ಹೊಂದಿದ್ದಾನೆ. ಸಮಕಾಲೀನ ಕಲೆಯು ಅವಕಾಶ, ಬೆಳಕು, ಪ್ರಕೃತಿ ಹಾಗೂ ಮಾನವನ ಆಂತರಿಕ ಪ್ರಪಂಚ ಮತ್ತು ನಮ್ಮಿಂದ ಹೊರತಾದ ಬಹಿರಂಗ ಇಂದ್ರಿಯ ಗ್ರಾಹ್ಯ ವಸ್ತುಗಳ ಕ್ಷೇತ್ರವನ್ನು ವ್ಯಾಪಿಸಿದೆ.

ಸಮಕಾಲೀನ ಕಲೆಯನ್ನು ಇತ್ಯಂತ ಸ್ವಾತಂತ್ರ್ಯದಿಂದ ಮತ್ತು ಹಿಂದಿಗಿಂತ ಇಂದಿನ ಕಲಾವಿದ ಎತ್ತರವಾಗಿ ಬೆಳೆದಿದ್ದು, ಹಿಂದಿನ ಪರಿಶುದ್ಧವಾದ ಕಲೆಯ ತತ್ವಗಳನ್ನು ಆಯಾ ವಿಷಯಕ್ಕೆ ಪ್ರಧಾನ ಗುಣವನ್ನು ಅನುಸರಿಸಿ ಕೆಲಸ ನಿರ್ವಹಿಸುತ್ತಿದ್ದಾರೆ. ಕಲೆಯು ಕಲಾವಿದನ ಮನೋಪ್ರವೃತ್ತಿಯನ್ನೊಳಗೊಂಡಿರುತ್ತದೆ ಮತ್ತು ಮಾನಸಿಕ ಆಧ್ಯಾತ್ಮಿಕ ಪ್ರತಿಬಿಂಬವಾಗಿರುವುದು. ಪ್ರತಿ ಕಲಾವಿದ ವೈಯಕ್ತಿಕವಾಗಿ ತನ್ನದೆ ಆದ ಭಾಷೆಯಲ್ಲಿ ಅಭಿವ್ಯಕ್ತಿಸುತ್ತಾನೆ. ಭಾರತದಲ್ಲಿ ನಾವು ಈಗ ಉತ್ತಮ ಸೃಜನಶೀಲ ಕಲಾವಿದನ್ನು ಹೊಂದಿದ್ದು, ಕೆಲವರು ಅಂತರರಾಷ್ಟ್ರೀಯ ಮನ್ನಣೆಯನ್ನು ಪಡೆದವರಾಗಿದ್ದಾರೆ. ಸಾಮಾನ್ಯವಾಗಿ ಹೇಳುವುದಾದರೆ ಕಲೆಯ ಚಟುವಟಿಕೆಯ ಬೆಳವಣಿಗೆಗೆ ಒಳ್ಳೆಯ ವಾತಾವರಣವಿದೆ ಮತ್ತು ಜೀವನದ ಕೊಡುಗೆಗೆ ಕೊಟ್ಟಿರುವ ಮನ್ನಣೆ ಹೆಚ್ಚುತ್ತಿದೆ.

*(ಮುಂದುವರಿಯುವುದು)*

# ಶಕುಂತಲಾ (ಕುಂತಿ) ದುಗ್ಗಪ್ಪಯ್ಯ ನಾಡಿಗ್

1999 ಅಕ್ಟೋಬರ್ 16, ಮೈಸೂರು ಅಸೋಸಿಯೇಶನ್, ಮುಂಬಯಿನ ನವೀಕೃತ ಸಭಾಂಗಣದ ಉದ್ಘಾಟನೆಯ ಸಂದರ್ಭ. ಮೈಸೂರು ಅಸೋಸಿಯೇಶನ್ ತನ್ನ ಹಲ ಕೆಲವು ಹಿರಿಯ ಸದಸ್ಯರನ್ನು ಅವರು ಅಸೋಸಿಯೇಶನ್‌ಗಾಗಿ ಮಾಡಿದ ಸೇವೆಯನ್ನು ಸ್ಮರಿಸಿ ಸನ್ಮಾನಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಅಂದು ಸನ್ಮಾನಿಸಲಾದವರಲ್ಲಿ ಶ್ರೀಮತಿ ಶಕುಂತಲಾ ದುಗ್ಗಪ್ಪಯ್ಯ ನಾಡಿಗ್ ಒಬ್ಬರು. ತುಂಬು ಸಂತೋಷ ಅವರ ಮುಖದಲ್ಲಿ ಎದ್ದು ಕಾಣುತ್ತಿತ್ತು. ಆ ವೇಳೆಗಾಗಲೇ ಅವರು ಮುಂಬೈ ಬಿಟ್ಟು ಬೆಂಗಳೂರಿಗೆ ತಮ್ಮ ವಾಸವನ್ನು ಸ್ಥಳಾಂತರಿಸಿದ್ದರು. ಮುಂಬಯಿಗೆ ಸುಮಾರು 1950ರ ದಶಕದಲ್ಲಿ ದುಗ್ಗಪ್ಪಯ್ಯ ನಾಡಿಗ್ ಅವರನ್ನು



1950ರಲ್ಲಿ ಕುಂತಿಯಮ್ಮಯವರನ್ನು ಸನ್ಮಾನಿಸಿದಾಗ ತೆಗೆದ ಚಿತ್ರ

ವಿವಾಹವಾಗಿ ಚಿಕ್ಕಮಗಳೂರಿನಿಂದ ದುಗ್ಗಪ್ಪಯ್ಯ ನಾಡಿಗ್ ಅವರನ್ನು ವಿವಾಹವಾಗಿ ಚಿಕ್ಕಮಗಳೂರಿನಿಂದ ಮುಂಬೈಗೆ ಬಂದ ಕುಂತಿ (ಅವರ ಪೂರ್ಣನಾಮಧ್ಯೇಯ ಶಕುಂತಲಾ, ಆದರೆ ಅವರು ಎಲ್ಲರಿಗೂ ಗೊತ್ತಿರುವುದು 'ಕುಂತಿ' ಎಂದೇ) ಕಳೆದ 5 ದಶಕಗಳಿಂದಲೂ ನಾಟಕ ರಂಗದಲ್ಲಿ ಸೇವೆ ಸಲ್ಲಿಸುತ್ತಾ ಬಂದವರು. ಪತಿ ದುಗ್ಗಪ್ಪಯ್ಯನವರು ಸ್ವತಃ ಕಲಾವಿದರಾದ್ದರಿಂದ, ಕುಂತಿಯವರಿಗೆ ಮನೆಯಿಂದ ಸಾಕಷ್ಟು ಪ್ರೋತ್ಸಾಹ ದೊರಕುತ್ತಿತ್ತು. ಅವರ ರಂಗ ಭೂಮಿಯ ಪ್ರವೇಶವಾಗಿದ್ದು ಮೈಸೂರು ಅಸೋಸಿಯೇಶನ್ನಿನ ಮಹಿಳಾ ವಿಭಾಗಕ್ಕಾಗಿ ಶ್ರೀಮತಿ ಸೀತಮ್ಮ ರಾವ್ ಅವರು ನಿರ್ದೇಶಿಸಿದ ದಾಶರಥಿ ದೀಕ್ಷಿತ್ ವಿರಚಿತ 'ಧನೋ ರೋಗ'ದಿಂದ. ಶ್ರೀಮತಿ ಸೀತಮ್ಮ ರಾವ್ ಅವರೂ ಸಹ ಮೈಸೂರು ಅಸೋಸಿಯೇಶನ್‌ನ ಒಬ್ಬ ಹಿರಿಯ ಕಲಾವಿದೆ, ಶ್ರೀ ದುಗ್ಗಪ್ಪಯ್ಯ ನಾಡಿಗ್ ಅವರಿಗೆ ನೆಂಟರೂ ಕೂಡ. 1999ರ ಆ ಸನ್ಮಾನ ಸಮಾರಂಭದಲ್ಲಿ ಗುರು, ಶಿಷ್ಯೆ ಇಬ್ಬರಿಗೂ ಒಂದೇ ರಂಗ ಮಂಚದ ಮೇಲೆ ಸನ್ಮಾನ ಮಾಡಲಾಯಿತು.' ಕುಂತಿಯವರು ಬಹಳ ಕೃತಜ್ಞತೆಯಿಂದ ಸೀತಮ್ಮನವರ ಗುರುತರ ಪ್ರಭಾವವನ್ನು ಸ್ಮರಿಸಿ ತಮ್ಮ ಆದರಲಾಂಜಲಿಯನ್ನು ಅರ್ಪಿಸಿದರು.

'ಧನೋರೋಗ'ದಿಂದ ಆರಂಭವಾದ ನಾಟಕ ರಂಗದ ಸಂಬಂಧ ಮುಂದೆ ಅವ್ಯಾಹತವಾಗಿ ಸಾಗಿ ಬಂತು. ಜಯ ಭೀಮರಾವ್, ವಿ.ಕೆ. ಮೂರ್ತಿ (ಕುಂಟ್ಟಿ), ಎಂ. ಎನ್. ರಾಮಚಂದ್ರ ರಾವ್, ಪುಟ್ಟಣ್ಣಯ್ಯ, ವೆಂಕಟರಾವ್ ತಲಗೇರಿ, ಕೆ.ಕೆ. ಸುವರ್ಣ, ಕೆ.ಜೆ. ರಾವ್, ಅಚ್ಯುತ ಸ್ವಾಮಿ, ಡಾ॥ ಬಿ.ಆರ್. ಮಂಜುನಾಥ್ ಮುಂತಾದ ಅನೇಕ ನಿರ್ದೇಶಕರೊಡನೆ ಅವರು ಕೆಲಸ ಮಾಡಿದ್ದರು. ತಲಗೇರಿ ವೆಂಕಟರಾವ್ ಅವರ 'ನಾಯಿ ನೆರಳು', (ಇದರಲ್ಲಿ ಇಂದಿನ ಹೆಸರಾಂತ ಸಿನಿಮಾ ನಟರಾದ ಅನಂತನಾಗ್ ಅವರು ಬಾಲ ಕಲಾವಿದರಾಗಿ ಅವರೊಡನೆ ನಟಿಸಿದ್ದರು) ಕೈಲಾಸಂರವರ 'ಸೂಳೆ', ದುಗ್ಗಪ್ಪಯ್ಯ ವಿರಚಿತ, ಡಾ॥ ಮಂಜುನಾಥ್ ನಿರ್ದೇಶಿಸಿದ 'ಬೆಂಕಿನ ಕಣ್ಣು', ಡಾ॥ ಮಂಜುನಾಥ್ ಅವರ 'ರಂಗೋಲಿ ನ್ಯಾಯ', ವಿ.ಕೆ. ಮೂರ್ತಿ ಅವರ 'ಪ್ರಗತಿ ಏನು ಗತಿ', ಕೆ.ಜೆ. ರಾವ್ ಅವರ 'ಸತ್ಯಂ ವದ ಧರ್ಮಂ ಚರ' ಕೆ.ಕೆ. ಸುವರ್ಣ ನಿರ್ದೇಶಿಸಿದ ವ್ಯಾಸರಾಯ ಬಲ್ಲಾಳರ 'ಅನುರಕ್ತೆ' ಇವು ಕೆಲವು ಪ್ರಮುಖ ನಾಟಕಗಳು.

ಇದಲ್ಲದೆ ಅವರು ಇನ್ನೂ ಅನೇಕ ನಾಟಕಗಳಲ್ಲಿ ನಟಿಸಿದ್ದರು. ಕುಂದಾ ರೇಗೆ ಹಾಗೂ ಕುಲಕರ್ಣಿಯವರೊಡನೆ ಅನೇಕ ರೇಡಿಯೋ ನಾಟಕಗಳಲ್ಲೂ ಅವರು ಭಾಗವಹಿಸಿದ್ದರು.

ಕುಂತಿ ಬಹಳ ಸರಳ ವ್ಯಕ್ತಿ, ಆದರೆ ತಮ್ಮ ವೇಷಭೂಷಣಗಳ ಬಗ್ಗೆ ಬಹಳ ಕಾಳಜಿ

(ಪುಟ 10ಕ್ಕೆ)

ಕೃತಿ ಸಮೀಕ್ಷೆ

## ಸಮಗ್ರ ಕನ್ನಡ ಕಾವ್ಯ ಮೀಮಾಂಸೆಯ ದರ್ಶನ

ಆಧುನಿಕ ಕನ್ನಡ ಕಾವ್ಯ ಮೀಮಾಂಸೆ
ಡಾ. ಎಸ್. ಎಂ. ಹಿರೇಮಠ
ಲಕ್ಷ್ಮಿ ಪ್ರಕಾಶನ, ಕಲಬುರ್ಗಿ
೨೦೦೨ ಪುಟ ೪೧೫
ಬೆಲೆ ರೂ. V+೪೧೫

ನಮ್ಮದು ಬಹು ಸಂಸ್ಕೃತಿಯ ನಾಡು. ಹತ್ತಾರು ಭಾಷೆ, ನಾನಾ ಧರ್ಮಗಳಿಂದಾಗಿ ವೈವಿಧ್ಯತೆ ಇಲ್ಲಿ ಎದ್ದು ಕಾಣುವ ಅಂಶ. ಈ ಮಾತು ಸಾಹಿತ್ಯ ಲೋಕಕ್ಕೂ ಅನ್ವಯಿಸುತ್ತದೆ. ಪ್ರತಿಯೊಂದು ಭಾಷಾ ಸೌಧದ ಒಳಗೆ ನಡೆದ ಪ್ರಕ್ರಿಯೆಯೂ ಭಿನ್ನ ಬಗೆಯದು. ಈ ಮಾತು ಕನ್ನಡ ಕಾವ್ಯ ಮೀಮಾಂಸೆಗೂ ಒಪ್ಪುತ್ತದೆ ಎಂಬುದನ್ನು ಡಾ. ಎಸ್. ಎಂ. ಹಿರೇಮಠ ಅವರು ಕನ್ನಡ ಕಾವ್ಯ ಮೀಮಾಂಸೆಯ ಕೃತಿಗಳ ಮೂಲಕ ಸಾಧಿಸಿ ತೋರಿಸಿಕೊಟ್ಟಿದ್ದಾರೆ. ಕನ್ನಡ ಕಾವ್ಯ ಮೀಮಾಂಸೆ, ವಚನಕಾರರ ಕಾವ್ಯ ಮೀಮಾಂಸೆ ಎಂಬ ಕೃತಿಗಳನ್ನು ಬರೆದು ಪ್ರಕಟಿಸುವುದರ ಮೂಲಕ ಇಂದು ನಮ್ಮಲ್ಲಿ ತಟಸ್ಥಗೊಂಡ ವೈಚಾರಿಕ ಚಿಂತನೆಗೆ ಚಾಲನೆ ನೀಡಿದ ಡಾ. ಹಿರೇಮಠ ಅವರು ಈಗ ಆಧುನಿಕ ಕನ್ನಡ ಕಾವ್ಯ ಮೀಮಾಂಸೆ ಎಂಬ ಬೃಹತ್ ಕೃತಿಯನ್ನು ಕನ್ನಡ ವಾಙ್ಮಯಕ್ಕೆ ನೀಡಿದ್ದಾರೆ. ಈ ತ್ರಿವಳಿಗಳ ಮೂಲಕ ಸಮಗ್ರ ಕನ್ನಡ ಕಾವ್ಯ ಮೀಮಾಂಸೆಯ ದರ್ಶನ ನಮಗಾಗುತ್ತದೆ.

ಕನ್ನಡ ಕವಿಗಳ ಮೀಮಾಂಸಾ ಸ್ತೋತ್ರವನ್ನು, ನಮ್ಮ ಕಾವ್ಯದ ಅನನ್ಯತೆಯನ್ನು ಹಾಗೂ ಕಾವ್ಯ ಮೀಮಾಂಸೆಯ ಆಶಯ -ಆಕೃತಿಗಳನ್ನು ಈ ಕೃತಿಗಳ ಮೂಲಕ ಲೇಖಕರು ಶೋಧಿಸಿ ಕೊಟ್ಟಿದ್ದಾರೆ. ಸಂಸ್ಕೃತ ಕಾವ್ಯ ಮೀಮಾಂಸೆಯನ್ನು ಹಿಡಿದುಕೊಂಡು ನಾವು ಮಾತಾಡಿದ್ದೇ ಮಾತಾಡಿದ್ದು. ಹೀಗಾಗಿ ಅಲ್ಲಿನ ಚರ್ಚೆ ಚರ್ವಿತ ಚರ್ವಣವಾಗಿ ಬಿಟ್ಟಿದೆ. ಹೀಗಿರುವಾಗ ಈ ನೆಲದ ನುಡಿಯ ಜಾಡನ್ನು ಹಿಡಿದು ಕಾವ್ಯ ಕಟ್ಟಿ ತಮ್ಮದೇ ಆದ ಮೀಮಾಂಸೆಯ ಸ್ವರೂಪವನ್ನು ಹುಟ್ಟು ಹಾಕಿದ ಬಗೆಯನ್ನು ಡಾ. ಹಿರೇಮಠ ಅವರು ಶಾಸ್ತ್ರೀಯವಾಗಿ ಅರ್ಥಪೂರ್ಣವಾಗಿ ವಿವೇಚನೆಗೆ ಗುರಿ ಮಾಡಿದ್ದಾರೆ.

ಇಪ್ಪತ್ತನೆಯ ಶತಮಾನ ಹೊಸ ಕನ್ನಡ ಸಾಹಿತ್ಯದ ಸುವರ್ಣ ಯುಗ. ನಿಜವಾಗಿಯೂ ಕನ್ನಡ ವಾಙ್ಮಯ ತುಂಬ ಶೀವಿ ಸಮೃದ್ಧವಾದುದು. ಈ ಕಾಲ ಘಟ್ಟದಲ್ಲೇ. ಆಧುನಿಕ ಕನ್ನಡ ಕಾವ್ಯ ಮೀಮಾಂಸೆ 'ಕೃತಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ನಮ್ಮ ಕನ್ನಡ ಕವಿಗಳು ಸ್ಥಾಪಿಸಿದ ಪ್ರತ್ಯೇಕ ಮೀಮಾಂಸಾಮಾರ್ಗದ ವೈಶಿಷ್ಟ್ಯವನ್ನು ಬೆರಗುಗೊಳ್ಳುವಂತೆ ತೋರಿಸಿಕೊಟ್ಟಿದ್ದಾರೆ. ಪರಿವರ್ತನ ಶೀಲವಾದ ಕಾವ್ಯ ಪರಂಪರೆಗೆ ಪರಿವರ್ತನಶೀಲವಾದ ಕಾವ್ಯ ಮೀಮಾಂಸೆಯು ಅನ್ವಯವಾಗುತ್ತದೆಂಬುದು ಹೆಚ್ಚು ಸಮಂಜಸವಾದ ಮಾತು. ಆಧುನಿಕ ಕನ್ನಡ ಕಾವ್ಯ ಮೀಮಾಂಸೆಯ ಪರಿಕಲ್ಪನೆಯು ಅತ್ಯಂತ ರೋಮಾಂಚನಕಾರಿಯಾಗಿರುವಂತೆ ಅಧ್ಭುತವೂ ಕುತೂಹಲಕಾರಿಯೂ ಆಗಿದೆ. ಮೇಲು ನೋಟಕ್ಕೆ ಕಾಣುವ ಕಾವ್ಯ ಸ್ವರೂಪ, ಕಾರಣ ಪ್ರಾಯೋಜನ, ಕವಿ - ಸಹೃದಯ, ಪ್ರತಿಭೆ, ಧ್ವನಿ, ರಸಮುಂತಾದ ಪರಿಭಾಷೆಗಳು ಸಾಂಪ್ರದಾಯಿಕವಾಗಿ ಕಂಡರೂ ಆಯಾ ಪ್ರಸ್ಥಾನಗಳಲ್ಲಿ ಕಾಣುವ ಬದಲಾವಣೆಯ ವೈವಿಧ್ಯಗಳು ಆಶ್ಚರ್ಯವನ್ನು ಉಂಟುಮಾಡಿ ಸಾಂಪ್ರದಾಯಿಕ ಪ್ರಸ್ಥಾನಗಳನ್ನು ಪುನರ್ ಮೌಲೀಕರಣಕ್ಕೆ ಒಳಗು ಮಾಡುತ್ತವೆ'' ಎಂಬುದನ್ನು ಅಧಿಕೃತವಾಗಿ ಇಲ್ಲಿ ವಿಶ್ಲೇಷಣೆಗೆ ಗುರಿಪಡಿಸಿದ್ದಾರೆ. ಕನ್ನಡ ಕಾವ್ಯದ ವೈಚಾರಿಕ ವಿಕಾಸನದ ಹಾದಿಯಲ್ಲಿ ಇದೊಂದು ಮೈಲಿಗಲ್ಲು. ಹೊಸಗನ್ನಡ ಕಾವ್ಯ ಮೀಮಾಂಸೆಯ ಸಿದ್ಧಾಂತಗಳಿಗೆ ಪಾಶ್ಚಿಮಾತ್ಯ ಸಿದ್ಧಾಂತಗಳ ಸಂಪರ್ಕ ಒದಗಿ ಅಲ್ಲಿ ಹೊಸತನ ಬಂದ ಬಗೆಯನ್ನು ಇಲ್ಲಿ ಲೇಖಕರು ವಿಶ್ಲೇಷಣೆಗೆ ಗುರಿಪಡಿಸಿರುವುದು ಗಮನಾರ್ಹ ಅಂಶ. ಇದರಿಂದ ಈ ಕೃತಿಯ ಮೌಲಿಕತೆ ಮತ್ತಷ್ಟು ಹೆಚ್ಚಿದೆ.

ಟಿ. ಎಸ್. ಎಲಿಯೆಟ್ ಒಂದು ಕಡೆ ಯಾವ ಒಬ್ಬ ಕವಿ ಕೃತಿಯೇ ಆಗಲಿ ಅದು ತನಗೆ ತಾನೇ ಪ್ರತ್ಯೇಕವಾದ ಘಟಕವೆಂದಷ್ಟೇ ಭಾವಿಸದೇ ಗತಕಾಲದ ಕವಿಕೃತಿಗಳ ಸಾಲಿನಲ್ಲಿರಿಸಿ ತೌಲನ ಕ್ರಮದಲ್ಲಿ ನೋಡಬೇಕು. ಎಂದಿದ್ದಾನೆ. ಈ ಪ್ರಜ್ಞೆಯನ್ನು ಕನ್ನಡ ಕವಿಗಳು ದುಡಿಸಿಕೊಂಡ ಬಗೆಯನ್ನು ಅರ್ಥ ಮಾಡಿಕೊಳ್ಳಲು ಹಿರೇಮಠರ ಕೃತಿ ಒಂದು ಒಳ್ಳೆಯ ಕೈಪಿಡಿಯಾಗಿದೆ. ಪ್ರಸ್ತುತ ಕೃತಿ ಬರೇ ಅಭಿಪ್ರಾಯ ಕಲೆ ಹಾಕಿರುವ ಗುಡಾಣವಲ್ಲ. ಪ್ರತಿಯೊಂದು ಪರಿಕಲ್ಪನೆಯನ್ನು ಲೇಖಕರಿಲ್ಲ. ಆಮೂಲಾಗ್ರವಾಗಿ ಶೋಧಕ್ಕೆ ಗುರಿಮಾಡಿ ಅಲ್ಲಿನ ಆಳ ಅಗಲ ವೈಭವನದ ಜೊತೆಗೆ ಮಿತಿಗಳತ್ತಲೂ ನಮ್ಮ ಗಮನ ಸೆಳೆದಿದ್ದಾರೆ. ಹೊಸಗನ್ನಡದ ವಿಭಿನ್ನ ಘಟ್ಟಗಳಲ್ಲಿ ವಿವಿಧ ಸಾಹಿತ್ಯ ಪಂಥಗಳ ಸಂದರ್ಭದಲ್ಲಿ ನಡೆದ ಚರ್ಚೆ ಹಾಗೂ ವ್ಯಕ್ತಿ ವಿಶಿಷ್ಟವಾದ ಅಭಿಪ್ರಾಯಗಳನ್ನು ವಿಶೇಷಣೆಗೆ ಗುರಿಮಾಡಿದ ಸಂಶೋಧಕನ ಸ್ಪಷ್ಟ ನಿಲುವು ಇಲ್ಲಿ ಎದ್ದು ಕಾಣುತ್ತದೆ. ಕನ್ನಡ ಕಾವ್ಯ ಮೀಮಾಂಸೆಯನ್ನು ಸ್ಥಾಪಿಸುವುದರ ಮೂಲಕ ಅನೇಕ ಹೊಸ ಮಾತುಗಳನ್ನು ಹೇಳಿದ್ದಾರೆ. ಕಾವ್ಯ ಕಾರಣವನ್ನು ಚರ್ಚಿಸುತ್ತಾ ''ಪ್ರತಿಭೆಯೊಂದಿರಬೇಕು । ವ್ಯುತ್ಪನ್ನ ಮತಿಬೇಕು ಅಭ್ಯಾಸ ಗುರು ಸೇವೆಬೇಕು । ಈ ಹಳೆಯ ಪಟ್ಟಿಗಿನ್ನೊಂದು ಸೇರಿಸಬೇಕು । ಕವಿಗೆ ಜಾಹಿರಾತು ಬೇಕು'' ಎಂಬ ಎಸ್.ವಿ.ಪಿ ಅವರ ಮಾತನ್ನು ಚರ್ಚಿಸಿದ್ದಾರೆ. ನಮ್ಮ ನಾಡಿನ ಹಿರಿಯ ಕವಿಗಳಾದ ಕುವೆಂಪು, ಬೇಂದ್ರೆ, ಕೆಎಸ್‌ನ ಪುತಿನ, ಗೋಕಾಕ, ಕಂಬಾ, ಡಿವಿಜಿ, ಅಡಿಗ, ಕಣವಿ, ಚಂಪಾ, ಸನದಿ ಅವರಿಂದ ಹಿಡಿದು ಬಿ. ಆರ್. ಲಕ್ಷ್ಮಣರಾವ್ ಮೊದಲಾದವರವರೆಗೆ ಒಟ್ಟಾಗಿ ಹೇಳುವುದಾದರೆ ನವೋದಯದಿಂದ ನವ್ಯೋತ್ತರದ ವರೆಗಿನ ಕನ್ನಡ ಕಾವ್ಯ ಮೀಮಾಂಸೆಯ ಸಮಗ್ರ ಚಿತ್ರವನ್ನು ಡಾ. ಹಿರೇಮಠ ಅವರು ಸೆರೆ ಹಿಡಿದಿದ್ದಾರೆ. ನಮ್ಮ ಕಾವ್ಯದ ಚಲನಶೀಲನತೆಯ ಚರಿತ್ರೆಯನ್ನು ಈ ಮೂರೂ ಕೃತಿಗಳಲ್ಲಿ ದಾಖಲಿಸಿ ಹೊಸ ಚಿಂತನಕ್ರಮದ ಹಾದಿಯನ್ನು ತೆರೆದುತೋರಿದ ಡಾ. ಎಸ್. ಎಂ. ಹಿರೇಮಠರು ಅಭಿನಂದನೆಗೆ ಪಾತ್ರರಾಗಿದ್ದಾರೆ.

- ಗಣೇಶ ಕಿರಾಡಿ

## ಶಕುಂತಲಾ (ಕುಂತಿ) ದುಗ್ಗಪ್ಪಯ್ಯ ನಾಡಿಗ್

(ಪುಟ ೯ರಿಂದ)

ವಹಿಸುತ್ತಿದ್ದರು. ತುಂಬಾ ಲಕ್ಷಣವಾದ ಸ್ತ್ರೀ, ಸ್ವಲ್ಪ ಸ್ಥೂಲ ಕಾಯ, ಹೀಗಾಗಿ ಹತ್ತು ಜನರಲ್ಲಿ ಎದ್ದು ಕಾಣುತ್ತಿದ್ದರು. ಮೈಸೂರು ಅಸೋಸಿಯೇಶನ್ ಹಾಗೂ ಇಲ್ಲಿನ ಸದಸ್ಯರ ಬಗ್ಗೆ ಬಹಳ ಅಭಿಮಾನ. ಅಸೋಸಿಯೇಶನ್‌ನಲ್ಲಿ ಮೊದಲಿನಿಂದಲೂ ಗಣಪತಿಯನ್ನು ಪ್ರತಿಷ್ಠಾಪಿಸಿ ಪೂಜಿಸುವ ಕ್ರಮವಿತ್ತು. 1973ರಲ್ಲಿ ಕುಂತಿಯವರು ಮೊದಲ ಬಾರಿಗೆ ಸ್ವರ್ಣಗೌರಿಯನ್ನು ಕೂರಿಸಿ ಪೂಜಿಸುವ ಕ್ರಮವನ್ನೂ ಆರಂಭಿಸಿದರು.

ಮುಂಬಯಿಯಿಂದ ಬೆಂಗಳೂರಿಗೆ ಸ್ಥಳಾಂತರಿಸಿದ ಅತ್ಯಲ್ಪ ಕಾಲದಲ್ಲೇ ಅವರು ಪತಿ ವಿಯೋಗವನ್ನು ಭರಿಸಬೇಕಾಯಿತು. ಆದರೂ ತಮ್ಮ ದುಃಖವನ್ನು ಸಹಿಸಿಕೊಂಡು ಅವರು ಕಲಾ ರಂಗದ ಸಂಬಂಧವನ್ನೂ ಉಳಿಸಿಕೊಂಡು ಬಂದರು. ರಂಗ ಭೂಮಿಗಿಂತ ಅವರಿಗೆ ಟಿ.ವಿ. ಸೀರಿಯಲ್ಸ್‌ನಲ್ಲೇ ಹೆಚ್ಚು ಅವಕಾಶಗಳು ಸಿಗಲಾರಂಭಿಸಿದರಿಂದ ಅದರ ಕಡೆಗೇ ವಾಲಿದ್ದರು.

ಇತ್ತೀಚೆಗೆ ಅವರು ಸ್ವಲ್ಪ ಅನಾರೋಗ್ಯದಿಂದ ಬಳಲುತ್ತಿದ್ದರು. ಆದರೂ 19.8.2002 ಅವರು ಕಾಲವಶರಾದರೆಂದು ಸುದ್ದಿ ಬಂದಾಗ ಅವರ ನಿಕಟವರ್ತಿಗಳಿಗೆಲ್ಲ ದೊಡ್ಡ ಆಘಾತವೇ ಆಯಿತೆಂಬುದು ಸುಳ್ಳಲ್ಲ. ಕೊನೆಯವರೆಗೂ ಚಟುವಟಿಕೆಯ ಮೂರ್ತಿ ಆಗಿದ್ದ ಕುಂತಿ ಚಿರ ವಿಶ್ರಾಂತಿ ಧಾಮಕ್ಕೆ ತೆರಳಿದ್ದರು.

ನೇಸರು ಮೈಸೂರು ಅಸೋಸಿಯೇಶನ್‌ನ ಪರವಾಗಿ 'ಕುಂತಿ' ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತ ಅವರ ಮಕ್ಕಳಾದ ರಾಜು, ಬಾಲು ಹಾಗೂ ಇತರ ಕುಟುಂಬದ ಸದಸ್ಯರಿಗೆ ಈ ತುಂಬಲಾರದ ನಷ್ಟವನ್ನು ಭರಿಸುವ ಶಕ್ತಿಯನ್ನು ಕೋರುತ್ತದೆ.

- ಭವಾನಿ

# ಹುಚ್ಚು

– ಜಿ.ಬಿ. ಜೇವೂರ

''ಹುಚ್ಚ!'' ಎಂದು ಕರೆದರೆ ಸಿಟ್ಟಿಗೇಳುವದು ಒಂದು ತರದ ಹುಚ್ಚುತನವೇ ಸರಿ. ಅಯ್ಯೋ ! ಹೀಗೆ ಹೇಳಿದೆನೆಂದು ನನ್ನನ್ನು 'ಹುಚ್ಚ' ಎಂದು ಕರೆಯುತ್ತೀರಾ? ಸರಿ ! ಇದೂ ಒಂದು ತರದ ಹುಚ್ಚುತನವೇ ಸರಿ. ಹುಚ್ಚುನನ್ನು ಕುರಿತು 'ಹುಚ್ಚ' ಎಂದು ಕರೆದರೆ ಸಿಟ್ಟು ಬರುವದು ಸ್ವಾಭಾವಿಕ.

ನನ್ನನ್ನು ನೀನು 'ಹುಚ್ಚ' ಎಂದು ಕರೆಯುವಾಗ ನೀನು 'ಜಾಣ'ನಾಗಿರಲೇಬೇಕು, ಹೌದಲ್ಲವೆ?... ಅಯ್ಯೋ! ಹುಚ್ಚ ! ನಿನ್ನನ್ನು ನೀನೇ 'ಜಾಣ' ಎಂದು ಹೇಳಿಕೊಳ್ಳುತ್ತಿಯಲ್ಲ. ಅಂದಾಗ ನೀನೆಂಥ ಜಾಣ? ಜಾಣನಾದವನು ಎಂದಾದರೂ ತನ್ನನ್ನು 'ಜಾಣ' ಎಂದು ಹೇಳಿಕೊಳ್ಳುತ್ತಾನೆಯೆ? ಇಲ್ಲವೆ ಇಲ್ಲ. ಹೂಂ ! ಅದಕ್ಕೆಂದೇ ನಾನು ನಿನ್ನನ್ನು 'ಹುಚ್ಚ' ಎಂದು ಕರೆದದ್ದು. ಈಗ ನನ್ನ ದೃಷ್ಟಿಯಲ್ಲಿ ನೀನು ಹುಚ್ಚನಾದಿ. ಅಂದಾಗ ನಾನು ನಿನ್ನನ್ನು 'ಹುಚ್ಚ' ಎಂದು ಕರೆಯಬಹುದಲ್ಲ. ನಿನ್ನನ್ನು 'ಹುಚ್ಚ'ನೆಂದು ಕರೆದರೆ ನಾನು ಜಾಣನಿರಲೇಬೇಕು.

ನಾವಿಬ್ಬರೂ ಹೂಂ ! ನಾವಿಬ್ಬರೂ ಜಾಣರೇ... ! ಛೇ ! ನಮ್ಮನ್ನು ನಾವೇ 'ಜಾಣ' ಎಂದು ಹೇಳಿಕೊಳ್ಳುವದು ಎಂಥ ಹುಚ್ಚುತನ. ನಮಗಿಂತ ಅದೆಷ್ಟೋ ಜಾಣರಾಗಿದ್ದಾರೆ. ಅವರ ಮುಂದೆ ನಾವು ಯಾವ ಗಿಡದ ಸೊಪ್ಪು?

ಕ್ಷಮಿಸಿ ! 'ಎಂಥದನ್ನಾದರೂ ಬರೆಯಬೇಕು ಎಂಬ 'ಹುಚ್ಚ'ನಿಂದ ಏನೇನೋ ಬರೆದಿದ್ದಾನೆ' ಎನ್ನುತ್ತೀರಾ? ಸರಿ. ನಾನೊಬ್ಬ ಹುಚ್ಚನಿರಬಹುದು. ಆದರೆ ನೀವು...? ಓದುವದನ್ನು ಬಿಡುತ್ತೀರಾ ಹುಚ್ಚ ಬರೆದದ್ದು, ಬೇಡವೆಂದರೂ ಓದುತ್ತಿರಲ್ಲ. ಇದೆಂಥ ಹುಚ್ಚುತನ ? ಓ ಹೌದಲ್ಲವೆ? ನಿಮಗೆ ಓದುವ ಹುಚ್ಚು. (ನನಗೆ ಬರೆಯುವ ಹುಚ್ಚು) ಇಷ್ಟಕ್ಕೇ ಸಾಕು, ಬಿಡಿ ಎಂದು ಹೇಳಿದ ಮೇಲಾದರ, ನೀವು ಬಿಡುತ್ತೀರಾ? ಊಹುಂ! ಇಲ್ಲವೇ ಇಲ್ಲ. ಯಾಕೆಂದರೆ ನಿಮಗೆ ಓದುವ ಹುಚ್ಚು!

''ಹುಚ್ಚ ! ನಾಟಕ ಬರೆದೆ, ಕಾದಂಬರಿ ಬರೆದೆ, ಕವನ ಬರೆದೆ, ಅದನ್ನು ಬರೆದೆ. ಇದನ್ನು ಬರೆದೆ ಎಂದು ಹೇಳುತ್ತಾ, ಅಲ್ಲಿ ಹಾಗಾಯಿತು, ಇಲ್ಲಿ ಹೀಗಾಯಿತು. ಎಂದು ಹೇಳುತ್ತ ಸುಳ್ಳುಸುಳ್ಳೇ ಅಡ್ಡಾಡತಾನೆ. ಚೆಂದಾಗಿ ಮನೆಹಿಡಕೊಂಡು ಇರಬಾರದೆ! ಗುಡಿಗೆ ಹೋಗಿ ಭಜನಾ ಮಾಡಿದೆ. ಸಂಗೀತ ತಂಡ, ನಾಟಕ ಕಂಪನಿ ಸೇರಿ ಹಾಡಿದೆ. ನಾಟಕ ಮಾಡಿದೆ. ಅಂತಾ ಊರೂರು ಅಲೆಯುವದೇ ಆಯಿತು''. ಹಾಗೆ ಹೇಳುವ ನೀವು ಅದೆಷ್ಟು ಸಲ ಭಜನಾ ನಡೆದಾಗ ಕುಳಿತು ಕೇಳಿಲ್ಲ? ಅದೆಷ್ಟು ಸಲ ನಿದ್ರೆಗೆಟ್ಟು ನಾಟಕ ನೋಡಿಲ್ಲ? ಹಾಡುಗಳನ್ನು ಅದೆಷ್ಟು ಚಿತ್ರಗೊಟ್ಟು ಓದುತ್ತಿಲ್ಲ. ಕೇಳುತ್ತಿಲ್ಲ? ಇದೆಲ್ಲ ನಿಮಗೇಕೆ ಬೇಕು?... ಮನರಂಜನೆಯೆ ? ಹೂಂ ! ಅದು ಕೂಡ ಒಂದು ತರದ ಹುಚ್ಚುತನವೇ, ಸಮಯ ಹಾಳು ಮಾಡುವದಲ್ಲದೆ, ದುಡ್ಡುಕೊಟ್ಟು, ನಿದ್ರೆಗೆಟ್ಟು ಓದುವದನ್ನಾಗಲೀ, ಕೇಳುವದನ್ನಾಗಲೀ, ನೋಡುವದನ್ನಾಗಲೀ ಅದೇಕೆ ಮಾಡಬೇಕು? ಅದೇಕೆ ಇಂಥ ಹುಚ್ಚುತನ? ನಿಮಗೆಲ್ಲ ಇಂಥ ಹುಚ್ಚುತನ ಇರುತ್ತದೆಂದೇ ನಮ್ಮಂಥ ನಾಲ್ಕು ಜನ ಹುಚ್ಚರು ಬದುಕುತ್ತಾರೆ. ಅಂತೆಯೇ ನನ್ನಂಥ ಹುಚ್ಚರ ಕೃತಿಗಳನ್ನು ಓದುತ್ತ, ನೋಡುತ್ತ, ಕೇಳುತ್ತ, ತಾಳ ಹಾಕುತ್ತಾರಲ್ಲವೆ? ಅಂದಾಗ ಅವರಿಗಾಗಿ ಬರೆಯುವ, ಹೇಳುವ, ಬಾರಿಸುವ, ಕುಣಿಯುವ ಹಕ್ಕು (ಹುಚ್ಚು) ಇದ್ದೇ ಇರುತ್ತದೆ. ನಿಮಗೆ ನಾವು ನಮ್ಮಂಥ ಹುಚ್ಚರು ಬೇಕೇ ಬೇಕು.

ನನ್ನ ದೃಷ್ಟಿಯಲ್ಲಿ ನೀನು, ನಿನ್ನ ದೃಷ್ಟಿಯಲ್ಲಿ ನಾನು, ಅಷ್ಟೇ ಅಲ್ಲ, ನಾವಿಬ್ಬರೂ ಇನ್ನೊಬ್ಬನ ದೃಷ್ಟಿಯಲ್ಲಿ ಹುಚ್ಚರೇ ಆಗಿರುತ್ತೇವೆ. ಒಬ್ಬನ ದೃಷ್ಟಿಯಲ್ಲಿ ಇನ್ನೊಬ್ಬ ಹುಚ್ಚ, ಅಂದಾಗ ತಮ್ಮ ತಮ್ಮ ದೃಷ್ಟಿಯಲ್ಲಿ ತಾವು ಜಾಣರು ಅಂದಾಗ ಹುಚ್ಚರಾರು? ಜಾಣರಾರು ? ಯಾರೂ ಜಾಣರಲ್ಲ. ಯಾರೂ ಹುಚ್ಚರಲ್ಲ.

ಹೌದು! ನ್ಯೂಟನ್‌ನೆಂಬ ಹುಚ್ಚನು ''ಹಣ್ಣು ಕೆಳಗೇ ಏಕೆ ಬೀಳಬೇಕು? ಮೇಲೆ ಏಕೆ ಹೋಗಬಾರದಿತ್ತು?'' ಎಂದು ಕೇಳಿದನಂತೆ. ಹಾಗೆ ನಾವೆಂದಾದರೂ ಕೇಳಿದ್ದೇವೆಯೆ? ಇಲ್ಲ. ಅಂತೆಯೇ ನಾವಿಷ್ಟು ಜಾಣ (ಕೋಣ)ರಾಗಿದ್ದೇವೆ. ಅಂಥ ಅದೆಷ್ಟೋ ಹುಚ್ಚರು (ವಿಜ್ಞಾನಿಗಳು) ಮಾಡಿದ ಹುಚ್ಚುತನದಿಂದಲೇ ನಾವಿಂದು, ಇಷ್ಟು ಸುಖಿಗಳಾಗಿದ್ದೇವೆ, ರವಿವರ್ಮ ! ಅವನಿಗೆ ಚಿತ್ರ ಬರೆಯುವ ಹುಚ್ಚು. ಬರೆದ, ಅವನು ಬರೆದ ಚಿತ್ರಗಳ ಎದುರಿಗೆ ಅದೆಷ್ಟು ಜನ ಹುಚ್ಚರಂತೆ ನಿಂತಿಲ್ಲ. ಬಾಯಿ ತೆರೆದಿಲ್ಲ? ಶೇಕ್ಸ್‌ಪೀಯರ್‌ಗೆ ನಾಟಕ ಬರೆಯುವ ಹುಚ್ಚು. ಅವನ ನಾಟಕಗಳಿಗೆ ಅದೆಷ್ಟು ಜನ ಹುಚ್ಚರಾಗಿಲ್ಲ.

ಒಬ್ಬನಿಗೆ ಹಣ ಗಳಿಸಬೇಕೆಂಬ ಹುಚ್ಚು, ಇನ್ನೊಬ್ಬನಿಗೆ ಹೆಸರು ಗಳಿಸಬೇಕೆಂಬ ಹುಚ್ಚು. ಮತ್ತೊಬ್ಬನಿಗೆ ಊರಿಗೆ, ನಾಡಿಗೆ ಉಪಕಾರ ಮಾಡಬೇಕೆಂಬ ಹುಚ್ಚು. ಯಾವುದೊಂದು ವ್ಯವಹಾರ ಮಾಡುವಾಗ, ವ್ಯಾಪಾರಿಗೆ ನಾಲ್ಕು ದುಡ್ಡು ಹೆಚ್ಚು ಗಳಿಸಬೇಕೆಂಬ ಹುಚ್ಚು ಇದ್ದರೆ, ಗಿರಾಕಿಗೆ ನಾಲ್ಕು ದುಡ್ಡು ಉಳಿಸಿಕೊಳ್ಳಬೇಕೆಂಬ ಹುಚ್ಚು, ಇಬ್ಬರಿಗೂ ಹುಚ್ಚು ಇದೆ ಎಂದೇ ಆ ವಸ್ತುವಿನ ನಿಜವಾದ ಬೆಲೆ ನಿಗದಿಯಾಗುತ್ತದೆ. ಇದರಿಂದಾಗಿ ಹುಚ್ಚುತನ ಇಬ್ಬರಲ್ಲೂ ಎಲ್ಲರಲ್ಲೂ ಬೇಕೇಬೇಕು.

ಈ ಭೂಮಿಯ ಮೇಲೆ ಹುಚ್ಚುತನ ಹುಚ್ಚರು ಎಂದು ಇಲ್ಲವಾಗುವರೋ ಅಂದೇ ಎಲ್ಲರಿಗೂ ಹುಚ್ಚು ಹಿಡಿದೀತು. 'ಹುಚ್ಚು' ಇದೊಂದು ಬಿಡಿಸಲಾಗದ ಒಗಟು, ಇದನ್ನು ಬಿಡಿಸಲು ಹೋಗಿ 'ಹುಚ್ಚ'ರಾಗುವದು ಬೇಡ. ಆಗಿರುವ ಹುಚ್ಚುತನವೇ ಸಾಕು. ನನ್ನ ಹುಚ್ಚು ನನಗೆ ಇರಲಿ. ನಿಮ್ಮ ಹುಚ್ಚು ನಿಮಗೆ.

ಈಗ ನಮಗಿರುವ ಹುಚ್ಚಿನಲ್ಲಿ ನಮ್ಮ ನಮ್ಮ ಕೆಲಸ ಮಾಡಿ ಕೊಂಡು ಹೋಗೋಣ. ಯಾರೇ ಜರಿದರೂ ನಮ್ಮ ಹುಚ್ಚುತನ ಬಿಡುವದು ಬೇಡ. ಅದರಲ್ಲಿಯೇ ನಿಜವಾದ ಜಾಣತನವಿದೆ. ನಾನು ನಾನೇ ಆಗಿ ಉಳಿಯಬೇಕಾದರೆ, ನನಗೆ ನನ್ನ ಹುಚ್ಚುತನ ಬೇಕೇ ಬೇಕು.

TRIMURTI
JEWELLERS
GOLD AND DIAMOND
ORNAMENTS
460/4, Venkatesh Niwas,
Ground Floor,
Bhaudaji Road,
Opp Mysore Association,
Matunga (C.Rly.)
Mumbai-400 019.
Phone : 402 34 85

# ವಡಾಲದ ರಾಷ್ಟ್ರೀಯ ಕನ್ನಡ ಶಾಲೆಯಲ್ಲಿ ಕಂಪ್ಯೂಟರ್ ಕೇಂದ್ರ ಉದ್ಘಾಟನೆ

## ಸಂಸ್ಕೃತಿಯ ಬಗ್ಗೆ ಎಚ್ಚರ ಅವಶ್ಯಕ -ಶ್ರೀ ವಿದ್ಯಾಸಿಂಹಾಚಾರ್ಯ

ಹಿಂದೂ ಸಂಸ್ಕೃತಿಯ ನಶಿಸಿ ಹೋಗುವ ಭೀಕರ-ಭಯಾನಕ ಪರಿಸ್ಥಿತಿ ನಮ್ಮ ಮುಂದೆ ಇದೆ ಹಾಗಾಗಿ ಸಂಸ್ಕೃತಿಯ ಬಗ್ಗೆ ಎಚ್ಚರ ವಹಿಸುವುದು ಅಗತ್ಯ ಎಂದು ಮುಲುಂಡಿನ ಸತ್ಯ ಧ್ಯಾನ ವಿದ್ಯಾ ಪೀಠದ ಕುಲಪತಿಗಳಾದ ಶ್ರೀ ವಿದ್ಯಾ ಸಿಂಹಾಚಾರ್ಯರು ತಾ. 28-8-2002 ಬುಧವಾರದಂದು ವಡಾಲದ ರಾಷ್ಟ್ರೀಯ ಕನ್ನಡ ಶಾಲೆಯಲ್ಲಿ ಪ್ರಾಥಮಿಕ ವಿಭಾಗದ ಕಂಪ್ಯೂಟರ್ ಕೇಂದ್ರದ ಉದ್ಘಾಟನೆಯನ್ನು ನೆರವೇರಿಸಿ ನೆರೆದಿದ್ದ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡುತ್ತಿದ್ದರು.

ಅವರು ತಂದೆ ತಾಯಿ ಹಾಗೂ ಗುರುಗಳಿಗೆ ಗೌರವವನ್ನು ಸಲ್ಲಿಸುವುದು ಸತ್ಯವನ್ನು ನುಡಿಯುವುದು ಮತ್ತು ಧರ್ಮದ ರಕ್ಷಣೆಯನ್ನು ಮಾಡುವುದು ನಮ್ಮ ಸಂಸ್ಕೃತಿಯ ಮೂಲತತ್ವಗಳಾಗಿವೆ ಎಂದು ತಿಳಿಸುತ್ತಾ ಮಾನವರಿಗೆ ಮಾತ್ರ ಹಿತವಾಗಲಿ ಎಂದು ಬೇಡುವ ಸಂಸ್ಕೃತಿ ನಮ್ಮದಲ್ಲ. ಅದಕ್ಕೆ ಬದಲಾಗಿ ನಮ್ಮಂತೆ ಪ್ರಾಣಿಗಳಿಗೂ ಸುಖ ದುಃಖಗಳಿವೆ ಅವುಗಳಿಗೂ ಹಿತವಾಗಲಿ ಉಜ್ವಲವಾದ ಬಾಳು ಬೆಳಗಲಿ ಎಂದು ಹಾರೈಸುವ ಉದಾತ್ತವಾದ ಧೀರ ಗಂಭೀರವಾದ ಸಂಸ್ಕೃತಿಯನ್ನು ರಕ್ಷಣೆ ಮಾಡಿರಿ ಎಂದು ತಿಳಿಸಿದರು.

ದೇಶದ ರಕ್ಷಣೆಗೆ ಶಸ್ತ್ರಾಸ್ತ್ರಗಳ ಅವಶ್ಯಕತೆ ಹೇಗೆ ಇದೆಯೋ ಹಾಗೆಯೇ ಸಂಸ್ಕೃತಿಯ ರಕ್ಷಣೆಗೂ ಶಾಸ್ತ್ರಗಳು ಅಗತ್ಯ ಅದರಂತೆ ನಮ್ಮ ಆತ್ಮ ಎಂಬ ಆಯುಧದಿಂದ ಸಂಸ್ಕೃತಿಯ ರಕ್ಷಣೆ ಸಾಧ್ಯ. ಸಂಸ್ಕೃತಿ ಅಂತರಾತ್ಮದ ವಸ್ತು ಒಳ್ಳೆಯ ಬದುಕೇ ಸಂಸ್ಕೃತಿಯ ಪ್ರತಿರೂಪ ಮೊಸರಿನಲ್ಲಿರುವ ಬೆಣ್ಣೆಯಂತೆ ನಮ್ಮ ಜೀವನದಲ್ಲಿ ಸಂಸ್ಕೃತಿಯು ಹಾಸು ಹೊಕ್ಕಾಗಿದೆ ಎಂದು ತಿಳಿಸಿದರು.

ಆತ್ಮಸತ್ಯ, ಧರ್ಮಸತ್ಯ, ನೀತಿವಂತಿಕೆ ಅಂತರಾತ್ಮದಿಂದ ಬಂದರೆ ಐಶ್ವರ್ಯ, ಕಲೆ, ವಿದ್ಯೆಗಳು ಬಾಹ್ಯದಿಂದ ಬಂದುದು ವೇಷಭೂಷಣ ಆಚಾರವಿಚಾರ ಆಹಾರದ ಮೇಲೆ ವಿದೇಶಿ ಸಂಸ್ಕೃತಿಯ ಪ್ರಭಾವದಿಂದಾಗಿ ನಮ್ಮ ಸಂಸ್ಕೃತಿಯು ನಶಿಸಲು ಕಾರಣವಾಗಿದೆ ಸೂರ್ಯನು ಹಗಲಲ್ಲಿ ಇಡೀ ಭೂಮಿಗೆ ಬೆಳಕನ್ನು ಕೊಡುವಂತೆ ಹಣತೆಯು ಮನೆಗೆ ಬೆಳಕನ್ನು ಕೊಡುತ್ತದೆ. ಅದರಂತೆ ನಮ್ಮ ಬಂಧು ಬಳಗ ಗೆಳೆಯರಿಂದ ಸಂಸ್ಕೃತಿಯ ರಕ್ಷಣೆಯನ್ನು ನಮ್ಮ ಮನೆಯಿಂದ ಪ್ರಾರಂಭಿಸಿದರೆ ನೀವು ಮಹಾತ್ಮರಾಗಲು ಸಾಧ್ಯ ಎಂದು ತಿಳಿಸಿದರು.

ಮಾತೃಭಾಷೆಯ ಅಗತ್ಯವಾದ ಬಗ್ಗೆ ತಿಳಿಸುತ್ತಾ ಇದು ಆತ್ಮೀಯ ಭಾಷೆ, ಬಂಧು ಬಳಗದ ಭಾಷೆ, ಅಮೃತದಿಂದ ಭಾಷೆ ತನ್ನ ಭಾಷೆಯನ್ನು ಕಲಿಯದೆ ಇತರ ಭಾಷೆಯನ್ನು ಕಲಿಯಬಾರದು. ಆದುದರಿಂದ ಅಕ್ಷರ, ಲಿಪಿ, ಓದು ಬರೆಹವನ್ನು ತಿಳಿದುಕೊಂಡಾಗ ತನ್ನತನ ಬರಲು ಸಾಧ್ಯವಿದೆ. ಇದರಿಂದ ಆತ್ಮಶಕ್ತಿಯು ವಿಕಾಸವಾಗಲು ಕಾರಣವಾಗಿ ಬಹಿರಂಗದ ಡೊಂಬರಾಟವನ್ನು ಬಿಟ್ಟಾಗ ಉತ್ತಮ ನಾಗರಿಕನಾಗಲು ಸಾಧ್ಯವೆಂದು ಹೇಳಿದರು.

ಮಾನವತಾವಾದಿ ಹಾಗೂ ಪ್ರಾಣಿಗಳಂತಹ ಮನುಷ್ಯರನ್ನು ನೋಡಿಲ್ಲ ಆದರೆ ಅದರ ಮಧ್ಯದಲ್ಲಿರುವ ಮಾನವರನ್ನು ನೋಡಿದ್ದೇನೆ. ಏಕೆಂದರೆ ನಮ್ಮಲ್ಲಿ ಪ್ರಾಮಾಣಿಕ ಜನರಿಲ್ಲ. ಹಾಗಾಗಿ ನಾವು ಮಾನವೀಯತೆಯಿಂದ ಇನ್ನೊಬ್ಬರೊಂದಿಗೆ ಗೆಳೆತನವನ್ನು ಬೆಳೆಸಿಕೊಳ್ಳಿ ಎಂದ ಅವರು ಶಾಲಾ ಹಳೆಯ ವಿದ್ಯಾರ್ಥಿಯಾದ ನನಗೆ ಶಾಲೆಗೆ ಬಂದುದು ಮರಳಿ ಮನೆಗೆ ಬಂದಂತಹ ವಿಶಿಷ್ಟ ಆನಂದವನ್ನು ಕೊಡುತ್ತಿವೆ ಎಂದು ತಿಳಿಸುತ್ತಾ ದೇವರ ದಯ ಶಾಲೆಯ ಹಾಗೂ ನಿಮ್ಮ ಮೇಲಿರಲಿ ಸಿದ್ಧಿ ಹಾಗೂ ಯಶಸ್ಸು ದೊರಕಲಿ ಎಂದು ನೆರೆದಿದ್ದ ಸಭಿಕರನ್ನು ಹರಸಿದರು.

ಸಭಾ ಕಾರ್ಯಕ್ರಮವು ಶ್ರೀ ವಿದ್ಯಾ ಸಿಂಹಾಚಾರ್ಯರ ಶಿಷ್ಯರ ವೇದ ಪಾರಾಯಣದಿಂದ ಪ್ರಾರಂಭಗೊಂಡರೆ ಶಾಲಾ ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಮಂಜುನಾಥಯ್ಯರವರು ಪ್ರಾಸ್ತಾವಿಕವಾಗಿ ಮಾತನಾಡುತ್ತಾ ಆಗಮಿಸಿದ ಅಭ್ಯಾಗತರನ್ನು ಸ್ವಾಗತಿಸಿದರು. ಶಾಲಾ ಕಾರ್ಯದರ್ಶಿ ಎಸ್. ಸುಬ್ರಮಣಿಯವರು ಶ್ರೀ ವಿದ್ಯಾ ಸಿಂಹಾಚಾರ್ಯರಿಗೆ ಫಲಪುಷ್ಪಗಳನ್ನಿತ್ತು ಗೌರವಿಸಿದರೆ ಶ್ರೀ ವಿದ್ಯಾ ಸಿಂಹಾಚಾರ್ಯರು ಈ ತಿಂಗಳು ನಿವೃತ್ತಿ ಹೊಂದಲಿರುವ ಶಾಲಾ ಶಿಕ್ಷಕಿ ಆಶಾ ಕಾಂಚನ್‌ರನ್ನು ಶಾಲು ಹೊದಿಸಿ ಫಲಪುಷ್ಪಗಳನ್ನಿತ್ತು ಹರಸಿದರು ಕಾರ್ಯಕ್ರಮದ ಕೊನೆಯಲ್ಲಿ ಆಶೀರ್ವಾದ ರೂಪದಲ್ಲಿ ಪ್ರಸಾದ ವಿತರಿಸಲಾಯಿತು.

### ಸಂಗೀತ ವಿದ್ಯಾಲಯದ ಸಾಧನೆ

ಡೊಂಬಿವಲಿಯಲ್ಲಿರುವ ಮೈಸೂರು ಸಂಗೀತ ವಿದ್ಯಾಲಯವು ಕಳೆದ 21 ವರ್ಷಗಳಿಂದಲೂ ಮಕ್ಕಳಿಗೆ ಸಂಗೀತ ಶಿಕ್ಷಣ ಕೊಡುತ್ತಾ, ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸುತ್ತಾ ಬಂದಿದೆ.

ಸಂಗೀತ ಶಿಕ್ಷಣವು ಕರ್ನಾಟಕ ಸರಕಾರದ ಸಂಗೀತ ಪರೀಕ್ಷಾ ಮಂಡಳಿಯ ಪಠ್ಯಕ್ರಮದಂತೆ ನಡೆಯುತ್ತಿದ್ದು

## ಸುತ್ತಮುತ್ತ

ಪ್ರತಿ ವರ್ಷ ಕರ್ನಾಟಕಕ್ಕೆ ಪರೀಕ್ಷೆಗೆ ಅಭ್ಯರ್ಥಿಗಳನ್ನು ಕಳಿಸಿ, ಶೇ. 100% ಉತ್ತಮ ಶ್ರೇಯಾಂಕ (Distiction) ಫಲಿತಾಂಶ ನಡೆಯುತ್ತಿದೆ.

ಈ ವರ್ಷ ಮೇ ತಿಂಗಳಲ್ಲಿ ನಡೆದ ಸಂಗೀತ ಪರೀಕ್ಷೆಗಳಲ್ಲಿ ಈ ಕೆಳಕಂಡ ವಿದ್ಯಾರ್ಥಿಗಳು ಭಾಗವಹಿಸಿ ಉತ್ತಮ ಅಂಕಗಳೊಂದಿಗೆ ತೇರ್ಗಡೆಯಾಗಿರುತ್ತಾರೆ.

ಜೂನಿಯರ್ ವಿಭಾಗ: ರವಿಕಿರಣ್(87.5%), ಪದ್ಮ (83.5%) ವಿದ್ಯಾ (81.25%) ಮಹಾಲಕ್ಷ್ಮೀ (72.5%), ವಿದ್ಯಾಲಕ್ಷ್ಮೀ (68%), ಸೌಮ್ಯಶ್ರೀ (67.5%), ಶ್ರೀನಾಥ್ (64.5%), ವೀಣಾ (55.5%).

ಸೀನಿಯರ್ ವಿಭಾಗ: ಸುಬ್ರಹ್ಮಣ್ಯ (90.5%).

ವಿದ್ಯಾಲಯವು ಇದುವರೆವಿಗೂ 102 ವಿದ್ಯಾರ್ಥಿಗಳನ್ನು ಜೂನಿಯರ್ ವಿಭಾಗಲ್ಲೂ, 10 ವಿದ್ಯಾರ್ಥಿಗಳನ್ನು ಸೀನಿಯರ್ ಬಳಗ (ಪದವಿಗೆ ಸಮ)ದಲ್ಲೂ 2 ವಿದ್ಯಾರ್ಥಿಗಳನ್ನು ವಿದ್ವತ್ ವಿಭಾಗ (ಎಂ.ಎ.ಗೆ ಸಮ)ದಲ್ಲಿ ತೇರ್ಗಡೆ ಮಾಡಿಸಿದ ಕೀರ್ತಿಯನ್ನು ಹೊಂದಿದೆ.

### ಮುಂಬಯಿಯ ವಿ.ವಿ. ಕನ್ನಡ ಎಂ.ಎ. ಮಂಜುನಾಥ ಅವರಿಗೆ ಮೊದಲ ರ್‍ಯಾಂಕ್

ಮುಂಬಯಿ ವಿಶ್ವವಿದ್ಯಾಲಯವು ಕಳೆದ ಮಾರ್ಚ್ ತಿಂಗಳಿನಲ್ಲಿ ನಡೆದ ಕನ್ನಡ ಎಂ.ಎ. ಅಂತಿಮ ಪರೀಕ್ಷೆಯಲ್ಲಿ ಕನ್ನಡ ವಿಭಾಗದ ವಿದ್ಯಾರ್ಥಿ ಮಂಜುನಾಥ ಎ.ಎನ್. ನಾರಾಯಣ ಗೌಡ ಅವರಿಗೆ ಮೊದಲ ರ್‍ಯಾಂಕ್ ದೊರಕಿದೆ. ಮಂಜುನಾಥ ಗೌಡ ಅವರು ಪ್ರಥಮ ಶ್ರೇಣಿ ಹಾಗೂ ಸರ್ವ ಪ್ರಥಮರಾಗಿ ಉತ್ತೀರ್ಣರಾಗಿರುವುದರಿಂದ ವರದಾರಾಜ ಆದ್ಯ ಸುವರ್ಣ ಪದಕಕ್ಕೂ ಅರ್ಹತೆ ಸಾಧಿಸಿದ್ದಾರೆಂದು ವಿಶ್ವವಿದ್ಯಾಲಯದ ಪ್ರಕಟಣೆ ತಿಳಿಸಿದೆ. ಶ್ರೀಯುತರು ಮೂಲತಃ ಮಂಡ್ಯ ಜಿಲ್ಲೆಯವರು.

### ವರದರಾಜ ಆದ್ಯ ಪ್ರಶಸ್ತಿಗೆ ಅರ್ಜಿ ಆಹ್ವಾನ

ಮುಂಬಯಿ: ಕರ್ನಾಟಕ ಸಂಘ ಮಾಟುಂಗ ಇದರ ಮಾಜಿ ಅಧ್ಯಕ್ಷ ದಿ. ವರದರಾಜ ಆದ್ಯ ಅವರ ಸ್ಮರಣಾರ್ಥ ಸಂಘವು ಪ್ರತಿ ವರ್ಷ ಕೊಡಮಾಡುವ ವರದರಾಜ ಆದ್ಯ ಸ್ಮಾರಕ ಪ್ರಶಸ್ತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. 1989ರಿಂದ ಸಂಘವು ಈ ಪ್ರಶಸ್ತಿಯನ್ನು ಪ್ರಾರಂಭಿಸಿದ್ದು ಕನ್ನಡ ಮರಾಠಿ ಭಾಷೆಗಳ ಸಾಹಿತ್ಯ, ಸಾಂಸ್ಕೃತಿಕ ಸೌಹಾರ್ದ ಮತ್ತು ಬಾಂಧವ್ಯವನ್ನು ಸಮೃದ್ಧಗೊಳಿಸುವಲ್ಲಿ ರಚನಾತ್ಮಕ ಸಾಧನೆ ಮಾಡಿದ ವ್ಯಕ್ತಿಗೆ ಅಥವಾ ಸಂಸ್ಥೆಗೆ ಇದನ್ನು

ಕೊಡಲಾಗುವುದು.

11,000/- ರೂ. ನಗದು ಹಾಗೂ ಪ್ರಶಸ್ತಿ ಪತ್ರಗಳನ್ನು ಹೊಂದಿದ ಈ ಪ್ರಶಸ್ತಿಯನ್ನು ಕೊಡುವಾಗ ವ್ಯಕ್ತಿಯ ಅಥವಾ ಸಂಸ್ಥೆಯ ಹಿಂದಿನ ಎರಡು ವರ್ಷಗಳ ಸಾಧನೆಯನ್ನು ಗಣನೆಗೆ ತೆಗೆದುಕೊಳ್ಳಲಾಗುವುದು. 2002ನೇ ಸಾಲಿನ ಪ್ರಶಸ್ತಿಗಾಗಿ 2000 ಮತ್ತು 2001ನೇ ಸಾಲಿನಲ್ಲಿ ಈ ಕ್ಷೇತ್ರದಲ್ಲಿ ವಿಶೇಷ ಸೇವೆ ಸಲ್ಲಿಸಿದವರನ್ನು ಪರಿಗಣಿಸಲಾಗುವುದು. ಆಸಕ್ತರು ಖಾಲಿ ಹಾಳೆಯಲ್ಲಿ ತಮ್ಮ ವಿವರಗಳನ್ನು ಮತ್ತು ಅದಕ್ಕೆ ಪೂರಕ ವಿವರ (ಪುರಾವೆ)ಗಳೊಂದಿಗೆ ಡಿಸೆಂಬರ್ 31, 2002ರ ಒಳಗಾಗಿ ಸಂಘದ ಈ ಕೆಳಗಿನ ವಿಳಾಸಕ್ಕೆ ತಲುಪುವಂತೆ ಕಳುಹಿಸಬೇಕಾಗಿ ಸಂಘವು ಪ್ರಕಟಣೆಯೊಂದರಲ್ಲಿ ತಿಳಿಸಿದೆ.

KARNATAKA SANGHA
Dr. M. Visveshwarayya Smarak Mandir
C.S.M. Marg
Off. T.H. Kataria Marg
Mahim, Mumbai-400 016

## ಜಗಜ್ಯೋತಿ ಕಲಾ ವೃಂದದ ಶ್ರೀಮತಿ ಸುಶೀಲಾ ಎಸ್. ಶೆಟ್ಟಿ ಸ್ಮಾರಕ ಕಥಾ ಪ್ರಶಸ್ತಿ ಮತ್ತು ಕವಿತಾ ಪ್ರಶಸ್ತಿ

ಮುಂಬಯಿ ಸಾಹಿತ್ಯಾತಕ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸದಾ ಕ್ರಿಯಾಶೀಲರಾಗಿದ್ದು ಮುಂಬಯಿಯ ಕನ್ನಡ ಸಾಹಿತ್ಯ ಲೋಕ ಬಹಳಷ್ಟನ್ನು ನಿರೀಕ್ಷಿಸುತ್ತಿದ್ದಾಗಲೇ ಇಹ ಯಾತ್ರೆಯನ್ನು ಮುಗಿಸಿದ ಶ್ರೀಮತಿ ಸುಶೀಲಾ ಎಸ್. ಶೆಟ್ಟಿಯವರ ಸ್ಮರಣಾರ್ಥ ಕಥೆ ಹಾಗೂ ಕವಿತಾ ಸ್ಪರ್ಧೆಗಳನ್ನು ಐದು ವರ್ಷಗಳಿಂದ ಆಯೋಜಿಸುತ್ತಿದ್ದೇವೆ. ಕನ್ನಡದ ಸಮಸ್ತ ಮಹಿಳೆಯರಿಗಾಗಿ ಆಯೋಜಿಸಲಾಗಿರುವ ಅಖಿಳ ಭಾರತ ಮಟ್ಟದ ಈ ಸ್ಪರ್ಧೆಯ ಎರಡು ವಿಭಾಗಗಳಲ್ಲೂ ಪ್ರತ್ಯೇಕವಾಗಿ ರೂಪಾಯಿ 3,000/- ನಗದು ಬಹುಮಾನ, ಪ್ರಶಸ್ತಿ ಫಲಕ ಮತ್ತು ಪ್ರಶಸ್ತಿ ಪತ್ರಗಳನ್ನೊಳಗೊಂಡಿದೆ.

### ಸ್ಪರ್ಧೆಯ ನಿಯಮಗಳು

೧. ಈ ಸ್ಪರ್ಧೆರಾಷ್ಟ್ರದಾದ್ಯಂತ ಸಮಸ್ತ ಕನ್ನಡ ಮಹಿಳೆಯರಿಗಾಗಿ. ೨. ಪ್ರಕಟಣೆಗೆ ಸಿದ್ಧವಾದ ಸ್ವರಚಿತ ಕಥಾ/ಕವಿತಾ ಸಂಗ್ರಹವಾಗಿರಬೇಕು. ೩. ಸ್ಪರ್ಧೆಗಳಲ್ಲಿ ಭಾಗವಹಿಸುವವರು ಕಥಾ ಪ್ರಶಸ್ತಿಗೆ ಒಂದು ಕಥಾ ಸಂಕಲನ/ಅಥವಾ ಕವಿತಾ ಪ್ರಶಸ್ತಿಗೆ ಒಂದು ಕವನ ಸಂಕಲನವನ್ನು ಕಳುಹಿಸಬೇಕು. ಒಬ್ಬರೇ ಎರಡೂ ಸ್ಪರ್ಧೆಗಳಲ್ಲಿ ಭಾಗವಹಿಸಬಹುದು. ೪. ಕಥೆ/ಕವಿತೆಗಳನ್ನು ಒಂದೇ ಮಗ್ಗುಲಲ್ಲಿ ಸ್ಫುಟವಾಗಿ ಬರೆದಿರಬೇಕು/ಟೈಪ್ ಮಾಡಿರಬೇಕು. ಕಾರ್ಬನ್ ಪ್ರತಿ ಝುರಾಕ್ಸ್ ಹಾಗೂ ಪ್ರಕಟಗೊಂಡ ಹಾಳೆಯ ಪ್ರತಿಗಳನ್ನು ಸ್ವೀಕರಿಸಲಾಗುವುದಿಲ್ಲ. ೫. ಕಥಾ ಪ್ರಶಸ್ತಿಗೆ ಹಸ್ತ ಪ್ರತಿಯು Fulscape ಹಾಳೆಯಲ್ಲಿ ನೂರು ಪುಟಗಳಿಂದ ನೂರಮೂವತ್ತು ಪುಟಗಳ ಮಿತಿಯಲ್ಲಿರಬೇಕು. ೬. ಕವನ ಸಂಕಲನದಲ್ಲಿ ಕಡಿಮೆಯೆಂದರೂ 30 ಕವಿತೆಗಳಿರಬೇಕು. ಖಂಡಕಾವ್ಯ ಅಥವಾ ಚುಟುಕು/ಮಿನಿ ಕವನ/ಕವಿತೆಗಳಾಗಿಬಾರದು. ೭. ಹಸ್ತಪ್ರತಿಯಲ್ಲಿ ಹೆರುರ ನಮೂದಿಸಿರಬಾರದು, ಹೆಸರು, ವಿಳಾಸ, ಪರಿಚಯ, ಇತ್ತೀಚಿನ ಭಾವಚಿತ್ರದೊಂದಿಗೆ ಹಸ್ತಪ್ರತಿಯ ಜೊತೆಗೆ ಪ್ರತ್ಯೇಕವಾಗಿ ಕಳುಹಿಸಬೇಕು. ೮.ಪ್ರವೇಶ ಶುಲ್ಕವಿಲ್ಲ. ೯. ಸ್ಪರ್ಧೆಗೆ ಬಂದ ಕೃತಿಗಳನ್ನು ಹಿಂತರುಗಿಸಲಾಗುವುದಿಲ್ಲ. ೧೦. ಪ್ರಶಸ್ತಿ ಪಡೆದ ಪ್ರತಿಗಳನ್ನು ಮುದ್ರಿಸುವಾಗ ರಕ್ಷಾ ಪುಟದ ಮೇಲ್ಗಡೆ ಹಾಗೂ ಪ್ರಥಮ ಒಳಪುಟದಲ್ಲಿ 'ಜಗಜ್ಯೋತಿ ಕಲಾ ವೃಂದದ ಶ್ರೀಮತಿ ಸುಶೀಲಾ ಎಸ್. ಶೆಟ್ಟಿ ಸ್ಮಾರಕ ಕಥಾ/ಕವಿತಾ ಪ್ರಶಸ್ತಿ ವಿಜೇತ ಕೃತಿ 2002' ಎಂದು ಮುದ್ರಿಸತಕ್ಕದ್ದು. ೧೧. ಪ್ರಶಸ್ತಿ ಪ್ರದಾನ ಸಮಾರಂಭ ವೃಂದದ ವಾರ್ಷಿಕೋತ್ಸವದಂದು ನೆರವೇರಲಿರುವುದು. ಪ್ರಶಸ್ತಿ ವಿಜೇತರನ್ನು ದೂರವಾಣಿ/ಪತ್ರದ ಮೂಲಕ ಸಂಪರ್ಕಿಸಲಾಗುವುದು. ೧೨. ಒಮ್ಮೆ ಈ ಪ್ರಶಸ್ತಿ ಪಡೆದವರು ಮತ್ತೆ ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶವಿಲ್ಲ. ೧೩. ಸ್ಪರ್ಧೆಯ ಬಗ್ಗೆ ಯಾವುದೇ ತೀರ್ಮಾನವನ್ನು ಕೈಗೊಳ್ಳುವ ಹಕ್ಕನ್ನು ವೃಂದವು ಕಾಯ್ದಿರಿಸಿಕೊಂಡಿದೆ. ೧೪. ಅನಾವಶ್ಯಕ ಪತ್ರ ವ್ಯವಹಾರಕ್ಕೆ ಅವಕಾಶವಿಲ್ಲ; ನಿರ್ಣಾಯಕರ ತೀರ್ಮಾನವೇ ಅಂತಿಮ. ೧೫. ಕೃತಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ 31-0-2002. ೧೬. ಕೃತಿಗಳನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕು. (ವಿಳಾಸವನ್ನು ಇಂಗ್ಲೀಷ್‌ನಲ್ಲಿ ಸ್ಫುಟವಾಗಿ ಬರೆದಿರಬೇಕು.)

S.N. Shetty & Associates
Office No. 1, Pushpahas
C.H.S. Subhash Road,
Behind Karnti Dept. Stores,
Dombivli (w)-421202.
Phone:- 0251-483092.

## ಕರ್ನಾಟಕ ಸಂಘದಲ್ಲಿ ಫೆಂಗ್ ಶ್ವೇ ಕಾರ್ಯಕ್ರಮ

ಮುಂಬಯಿ: ಕರ್ನಾಟಕ ಸಂಘ, ಮುಂಬಯಿಯ ಯುವ ವಿಭಾಗದ ಕನ್ನಡಿಗರಿಗಾಗಿ ಆಯೋಜಿಸಿರುವ ಫೆಂಗ್ ಶ್ವೇ ಶಾಸ್ತ್ರದ ಪರಿಚಯ ಜೊತೆಗೆ ರೇಖಿ, ಮನಿಮಂತ್ರ ಪರಿಚಯದ ಅಪೂರ್ವ ಕಾರ್ಯಕ್ರಮವು ದಿನಾಂಕರಂದು 17-08-2002 ಕಿರು ಸಭಾಗೃಹದಲ್ಲಿ ನಡೆಯಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ಮುಖ್ಯ ಅತಿಥಿಯಾಗಿ ಆಗಮಿಸಿದ ರೇಖಿ, ಮನಿಮಂತ್ರ, ಫೆಂಗ್ ಶ್ವೇ ಶಾಸ್ತ್ರ ತಜ್ಞೆ ಶೋಭಾ ಡಿ. ರಾವ್‌ರವರು ಮಾಡಿದರು. ಅವರು ತಮ್ಮ ಭಾಷಣದಲ್ಲಿ ಈಗಿನ ಯಾಂತ್ರಿಕ ಜೀವನದಲ್ಲಿ ಯಶಸ್ವಿಯಾಗಬೇಕಾದರೆ ಹಣವು ಅತ್ಯಗತ್ಯ. ಹಣವಿಲ್ಲದಿದ್ದರೆ ಯಾರೂ ಕೇಳುವುದಿಲ್ಲ. ಹಣವನ್ನು ಗಳಿಸಲು ಈ ಶಾಸ್ತ್ರದ ಉಪಯೋಗವನ್ನು ಮಾಡಬಹುದು. ಟಾಟಾ, ಬಿರ್ಲಾ, ಅಂಬಾನಿಯವರು ಇದಕ್ಕೆ ಒಳ್ಳೆ ಉದಾಹರಣೆ. ನಾವು ನಮ್ಮ ಶಕ್ತಿಯನ್ನು ಉದ್ದೀಪನಗೊಳಿಸಲು ಈ ಶಾಸ್ತ್ರವನ್ನು ಸಹಾಯಕವಾಗುವುದು ಎಂದು ವಿವರಣಾತ್ಮಕವಾಗಿ ತಿಳಿಸಿದರು.

ಗೌರವ ಅತಿಥಿಯಾ ಆಗಮಿಸಿದ ಫೆಂಗ್ ಶ್ವೇ ಶಾಸ್ತ್ರ ತಜ್ಞೆ ಶ್ರೀಮತಿ ಅನಿತಾ ಸರಾಫ್‌ರವರು ಈ ಶಾಸ್ತ್ರದ ಪರಿಚಯವನ್ನು ಸಭಿಕರಿಗೆ ಅರ್ಥಪೂರ್ಣವಾಗಿ ತಿಳಿಸುತ್ತಾ 'ಭಾರತ ಮೂಲವಾದ ಫೆಂಗ್ ಶ್ವೇ ಶಾಸ್ತ್ರವನ್ನು ಚೀನೀಯರು ಬದಲಾಯಿಸಿ ಇದಕ್ಕೆ ಜಾಗತಿಕ ಮನ್ನಣೆ ದೊರಕಿಸಿದ್ದಾರೆ. ಅಂಕಿಗಳ ಮತ್ತು ದಿಕ್ಕುಗಳ ಮಹತ್ವ ಜೊತೆಗೆ ಪ್ರಾಣಿಗಳನ್ನು ಸಾಂಕೇತಿಕವಾಗಿ ಬಳಸಿ ತಮ್ಮ ಭವಿಷ್ಯವನ್ನು ಹೇಗೆ ಯಶಸ್ವಿಯಾಗಿ ರೂಪುಗೊಳಿಸಬಹುದು ಎಂದು ಹೇಳಿದರು.

ಕಾರ್ಯಕ್ರಮವು ಗಾಯತ್ರಿ ರಾಮು ಸಂಗಡಿಗರವರ ಪ್ರಾರ್ಥನೆಯಿಂದ ಆರಂಭವಾಯಿತು. ಸ್ವಾಗತ, ಪ್ರಸ್ತಾವನೆ ಮತ್ತು ಅತಿಥಿಗಳ ಪರಿಚಯವನ್ನು ಸಂಘದ ಗೌರವ ಕಾರ್ಯದರ್ಶಿ ಭರತ್‌ಕುಮಾರ್ ಪೊಲಿಪು ಮಾಡಿದರು. ಎಂ.ಎಂ. ಕೋರಿ, ಶೋಭಾ ಡಿ. ರಾವ್, ಅನಿತಾ ಸರಫ್‌ರವರಿಗೆ ಕಾರ್ಯಕಾರಿ ಸಮಿತಿ ಸದಸ್ಯೆ ಶೈಲಿನಿ ರಾವ್, ಉಪ ಸಮಿತಿ ಸದಸ್ಯೆಯರಾದ ತಾರಾ ರಾವ್ ಹಾಗೂ ವಸಂತ ಶ್ರೀ ರಾವ್‌ರವರು ಹೂಗುಚ್ಛ ಕೊಟ್ಟು ಗೌರವಿಸಿದರು.

ಕಾರ್ಯಕ್ರಮದ ನಿರ್ವಹಣೆಯನ್ನು ದಿನೇಶ್ ಕುದ್ರೂರವರು ಮಾಡಿದರೆ ಉಪ ಸಮಿತಿ ಸದಸ್ಯರಾದ ಶೈಲೇಶ್ ಸುವರ್ಣರು ಧನ್ಯವಾದ ಅರ್ಪಿಸಿದರು.

## ಕರ್ನಾಟಕ ಸಂಘ, ಸಾಹಿತ್ಯ ಸ್ಪರ್ಧೆ

ಮುಂಬಯಿ ಕರ್ನಾಟಕ ಸಂಘದ ಮುಖವಾಣಿ 'ಸ್ನೇಹ ಸಂಬಂಧ' ಪತ್ರಿಕೆಯ ಸಾಹಿತಿಗಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಕಥೆ, ಕವನ, ಲೇಖನಗಳ ಏಕಾಂಕ ನಾಟಕ ಹಾಗೂ ಹಾಸ್ಯ ಲೇಖನಗಳ ಸಾಹಿತ್ಯ ಸ್ಪರ್ಧೆಯನ್ನು ಆಯೋಜಿಸಿದೆ. ಸ್ಪರ್ಧೆಯ ವಿವರಗಳು ಈ ಕೆಳಗಿನಂತಿದೆ.

1. ಕಥೆ ಹಾಗೂ ಲೇಖನ ಫುಲ್‌ಸ್ಕೇಪ್ ಹಾಳೆಯ ಎಂಟು ಪುಟಗಳನ್ನು ಮೀರಬಾರದು. 2. ನಾಟಕ ಒಂದು ಗಂಟೆ ಮಿತಿಯದ್ದಾಗಿರಬೇಕು. 3. ಲೇಖನಕ್ಕೆ ಯಾವುದೇ

ವಿಷಯವನ್ನು ಲೇಖಕರು ಆರಿಸಿಕೊಳ್ಳಬಹುದು. ಅವು ವಿಚಾರಪೂರ್ಣ ವಾಗಿರಬೇಕು. 4. ಹಸ್ತ ಪ್ರತಿಯನ್ನು ಹಿಂತಿರುಗಿಸಲಾಗುವುದಿಲ್ಲ. 5. ಕವನ ಒಂದು ಪುಟವನ್ನು ಮೀರಬಾರದು (ಫುಲ್ ಸ್ಕೇಪ್) 6. ಪ್ರತಿಯೊಂದು ವಿಭಾಗದಲ್ಲೂ ಪ್ರಥಮ, ದ್ವಿತೀಯ ಹಾಗೂ ತೃತೀಯ ಬಹುಮಾನ ಕ್ರಮವಾಗಿ ರೂ. 1,000/- ರೂ. 750/- ಹಾಗೂ ರೂ. 500/-ನ್ನು ಕೊಡಲಾಗುವುದು. 7. ಲೇಖಕರು ತಮ್ಮ ಹೆಸರು, ವಿಳಾಸ, ದೂರವಾಣಿ ಸಂಖ್ಯೆ ಹಾಗೂ ಭಾವಚಿತ್ರವನ್ನು ಜೊತೆಗೆ ಪ್ರತ್ಯೇಕವಾಗಿ ಕಳುಹಿಸಬೇಕು. 8. ಬರಹಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ನವೆಂಬರ್, 30, 2002. 9. ಪ್ರತಿಯೊಂದು ಪ್ರತಿಯ ಮೇಲ್ಭಾಗದಲ್ಲಿ 'ಸ್ನೇಹ ಸಂಬಂಧ ಸಾಹಿತ್ಯ ಸ್ಪರ್ಧೆ'ಗೆ ಎಂದು ಬರೆದು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕು.

Editor
Sneha Sambandha
Karnataka Sangha
Dr. M. Visveshwarayya Smarak Mandir
C.S.M. Marg, Near Matunga Road Station,
Matunga (W), Mumbai-400 016

## ದಿಲ್ಲಿಯಲ್ಲಿ ಪಂಪನ **1,100**ನೇ ಜನ್ಮ ದಿನೋತ್ಸವ ಪಂಪನ ಕನ್ನಡ ಪ್ರೇಮ ಆದರ್ಶವಾಗಿರಿಸಿಕೊಳ್ಳಲು ಕರೆ

ಕರ್ನಾಟಕದ ಮಹಾಕವಿ 1,100ನೇ ಜನ್ಮದಿನೋತ್ಸವವನ್ನು ದಿಲ್ಲಿಯಲ್ಲಿನ ಕನ್ನಡ ಸಾಹಿತಿಗಳು, ಕವಿಗಳು, ಕಲಾವಿದರು, ಪ್ರಾಧ್ಯಾಪಕರು, ವಿಮರ್ಶಕರು ಜುಲೈ 15ರಂದು ದಿಲ್ಲಿಯಲ್ಲಿ ವೈಭವದಿಂದ ಆಚರಿಸಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ 'ದೆಹಲಿ ಕನ್ನಡಿಗ' ಪತ್ರಿಕೆ ಸಂಪಾದಕ ಬಾ. ಸಾಮಗ ಅವರು ಕ್ರಿ.ಶ. 902ರಲ್ಲಿ ಅಣ್ಣಿಗೇರಿಯಲ್ಲಿ ಜನಿಸಿದ ಪಂಪ ಚಾಲುಕ್ಯ ದೊರೆ ಅರಿಕೇಸರಿಯ ಆಶ್ರಯದಲ್ಲಿ ಚಂಪೂ ಪ್ರಕಾರದಲ್ಲಿ ಆದಿಪುರಾಣ ಹಾಗೂ ವಿಕ್ರಮಾರ್ಜುನ ವಿಜಯ ಕೃತಿ ಬರೆದು ಕನ್ನಡ ಸಾಹಿತ್ಯದಲ್ಲಿ ಸ್ವರ್ಣಯುಗ ಆರಂಭಿಸಿದ ಮಹಾಕವಿ ಎಂದರಲ್ಲದೆ, ಪಂಪನ ಕೃತಿಯಲ್ಲಿ ತುಂಬಿ ಬಂದಿರುವ ಕನ್ನಡ ನಾಡಿನ ವರ್ಣನೆ, ಕನ್ನಡಿಗರ ಗುಣ ವಿಶ್ಲೇಷಣೆಯನ್ನು ಇಂದಿನ ಸಾಹಿತಿಗಳು ಆದರ್ಶವಾಗಿರಿಸಿಕೊಂಡು ಸಾಹಿತ್ಯದಿಂದ ಕನ್ನಡ ನಾಡ, ನುಡಿಯ ಮಮತೆ ಹೆಚ್ಚಿಸಬೇಕೆಂದು ಕರೆ ನೀಡಿದರು.

ಲೇಖಕಿ ಡಾ. ಶುಭಾ ಬ್ಯಾನರ್ಜಿ ಅವರು ಮಹಭಾರತದ ಪಾತ್ರಗಳಿಗೆ ಒಂದು ಹೊಸ ಚೈತನ್ಯವನ್ನು ನೀಡಿದ ಮಹಾಕವಿ ಪಂಪನೆಂದರಲ್ಲದೆ, ಪಂಪನ ಆದಿಪುರಾಣದ ಬಳಿಕ ಕನ್ನಡದಲ್ಲಿ ಅನೇಕ ಜೈನ ಪುರಾಣಗಳು ಬಂದರೂ ಆದಿ ಪುರಾಣವನ್ನು ಮೀರಿಸುವ ಗ್ರಂಥ ಕನ್ನಡದಲ್ಲಿ ಇನ್ನೂ ಬಂದಿಲ್ಲವೆಂದರು.

*(ಪುಟ 15ಕ್ಕೆ)*

### ಹಿಂದಿರುಗಿಸಿರಿ

ಡುಂಡಿರಾಜ್ ಹೇಳಿದರು
''ರಾವಣನ ಹೆಂಡತಿ ಮಂಡೋದರಿ
ಕನ್ನಡ ಪುಸ್ತಕವ ಕೊಂಡೋದಿರಿ''
ನಾ ಹೇಳ ಬಯಸುವೆ ಕೇಳಿರಿ
ಓದಲು ಪಡೆದ ಪುಸ್ತಕವ ತಪ್ಪದೇ ಹಿಂದಿರುಗಿಸಿರಿ.

### ಮಾತು

ಮಾತು ಬೆಳ್ಳಿ ಮೌನ ಬಂಗಾರ
ಅಳವಡಿಸಿಕೊಂಡರೆ ಬಾಳು ಸುಂದರ
ಅನವಸರ ಮಾತುಗಳಿಂದಾಗಬಹುದು ಸಮರ
ಅವಶ್ಯವಿದ್ದಷ್ಟೇ ಮಾತನಾಡಿ ಉಳಿಸಿಕೊಳ್ಳಿ ಆಚಾರ

### ತಾಯಿ

ತಾಯಿ ಹಾಲಿಗಿಂತ ಶ್ರೇಷ್ಠ ಮತ್ತೊಂದಿಲ್ಲ
ಡಬ್ಬ ಹಾಲು ಎಂದಿಗೂ ತಾಯಿ ಹಾಲಿಗೆ ಸಮವಲ್ಲ
ತಾಯಿಯ ಮಮತೆಗಿಂತ ಮಗುವಿಗಿನ್ನೇನೂ ಬೇಕಿಲ್ಲ
ಆಯಾಳಿಗೆ ತಾಯಿಗಿರುವ ಪ್ರೇಮ ಪ್ರೀತಿಗಳಿರುವುದಿಲ್ಲ
ಇದು ವರೆಗಾವ ಮಗುವೂ ತಾಯಿಯ ಕೈಯಿಂದ ಜಾರಿ ಬಿದ್ದಿಲ್ಲ.

### ಸತ್ಯ ಅಹಿಂಸೆ

ಗಾಂಧೀಜೀ ಬೋಧಿಸಿದರು ಸತ್ಯ-ಅಹಿಂಸೆ
ಎಲ್ಲರೂ ಆಚರಿಸಬೇಕು ಮಾಡದೇ ಮೀಮಾಂಸೆ
ಸತ್ಯಕ್ಕಾಗಿ ಎಲ್ಲವನೂ ಕಳೆದುಕೊಂಡ ಹರಿಶ್ಚಂದ
ಉಳಿಯಿತವನ ಹೆಸರು ಇರುವ ತನಕ ಸೂರ್ಯ-ಚಂದ್ರ
ಅಹಿಂಸೆ ಆಚರಿಸಿ ಅನವರತ ಬುದ್ಧ - ಬಸವ-ಗಾಂಧೀ
ಉಳಿದರು ಎಲ್ಲರ ಮನದಲ್ಲಿ ಪ್ರಬುದ್ಧರಾಗಿ

### ಅಡುಗೆ

ನನ್ನ ಹೆಂಡತಿಯ ಅಡುಗೆ ಬಲು ರುಚಿ
ಕಾರಣ ಅವಳ ಹೆಸರೇ ಸುರುಚಿ
ಮೆಚ್ಚಲಿಲ್ಲವೆಂದೂ ಅವಳ ಅಡುಗೆಯ ನಾನು
ಅದಕಿರಬೇಕು ಹಿಡಿದಿರುವೆ ನಾನೇ ಇಂದು ಸೌಟು
- ನಿರ್ಲೆಪ್ ಪ್ಯಾನು

### ನನ್ನವಳು

ನನ್ನವಳು ನನಗೆ ಬಲು ಅಚ್ಚು ಮೆಚ್ಚು
ಅದನೋಡಿ ಎಲ್ಲರೂ ಪಡುವರು ಹೊಟ್ಟೆಕಿಚ್ಚು
ಅರಿತು ನಡೆವ ಸತಿ ಇರೆ ಸ್ವರ್ಗಕ್ಕೆ ಹಚ್ಚೆಂದರಾರೋ ಕಿಚ್ಚು
ಕೆಚ್ಚುಮನದಿಂದ ಕೊಚ್ಚುವೆ ಅವಳು ಜಡೆಯಾದರೆ ನಾನು ಅವಳ ಜಡೆಗುಚ್ಚು

### ಜೀವನ

ಜೀವನ ಮಧುರ ಸುಂದರ
ಎಲ್ಲರೂ ಅರಿತು ನಡೆದಾಗ
ಜೀವನ ಘೋಪ ಭಯಂಕರ
ಒಬ್ಬರೆಂದರೆ ಇನ್ನೊಬ್ಬರಿಗೆ ಆಗದಾಗ.

- ಕೃಷ್ಣಮೂರ್ತಿ ಕಲುಮಂಗಿ.



ಶ್ರೀಮತಿ ಲಕ್ಷ್ಮೀ ಚಂದ್ರಶೇಖರ ಅವರ ಏಕಪಾತ್ರಾಭಿನಯ. 'ಹೆಣ್ಣಲ್ಲವೇ' ನಾಟಕದ ಒಂದು ದೃಶ್ಯ.

(ಕಳೆದ ಸಂಚಿಕೆಯಲ್ಲಿ ಇದರ ಶಿರೋನಾಮೆ ತಪ್ಪಾಗಿ ಅಚ್ಚಾಗಿತ್ತು. - ಸಂ.)

## ದಿಲ್ಲಿಯಲ್ಲಿ ಪಂಪನ ಜನ್ಮ ದಿನೋತ್ಸವ

(ಪುಟ 14ರಿಂದ)

ಅಧ್ಯಕ್ಷತೆ ವಹಿಸಿದ್ದ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಮಾಜಿ ಮುಖ್ಯ ಗ್ರಂಥಪಾಲಕ ಹಾಗೂ ವಿಮರ್ಶಕ ಬಿ. ನಾರಾಯಣ ರಾವ್ ಅವರು ಪಂಪನ ವಿಕ್ರಮಾರ್ಜುನ ವಿಜಯ ಅಥವಾ ಪಂಪ ಭಾರತ ಕಾವ್ಯ ದೃಷ್ಟಿಯಿಂದ ಆದಿಪುರಾಣಕ್ಕಿಂತಲೂ ಉತ್ತಮವಾಗಿದೆ ಎಂದರಲ್ಲದೆ, ಇದರಲ್ಲಿನ ಪ್ರತಿನಾಯಕ ಕರ್ಣನಿಗೆ ಪಂಪ ತೋರಿಸಿದ ಸಹಾನುಭೂತಿ ನಿಜಕ್ಕೂ ಕನ್ನಡಿಗರ ಮನೋವೈಶಾಲ್ಯಕ್ಕೆ ನಿದರ್ಶನವೆಂದರು.

## MATRIMONIAL

Alliance invited for smartha girl, good looking, fair, height 5.7 1/2, working in a reputed Co. looking for a well settled educated boy. Contact : Shalini Murthy Tel. : 403 3686

***

Alliance Invited for Smartha Kannada Kashyapa B.Sc.,MBBS, Fair Girl, 167 cms. 27 years, now doing Higher studies in England (MRCP) from well Qualified Doctor / Engineer / MBA, Employed Preferably in England. Persons from Mumbai / Bangalore likely to be in UK may also apply with Bio-data / Horoscope / Photo (R) To 088 452 02231 / 5080 / 98452 71722.

G. K. Nagesh, B/o G. Srinivas,
Health Centre Indian Institute of Science,
Bangalore 560 012

***

Alliance, Invited for Smartha Kannada Brahmin girl, 26 years, 168 cms, / BE (Rec) MBA Employed as Manager MNC, Mumbai being posted to Singapore from qualified & suitably employed, BEMBA / BEMS / M Tech, preferably in Singapore may apply with Horoscope Bio data and Photo. Persons from Mumbai / Bangalore likely to be in Singapore may also apply.

Apply with H/B/P (Returnable)
To.
Ph- 098452 02231 / 98452 71722 / 080 2715080

Ms. Nandini Nagesh Navale
C/o G. Srinivas Health Centre
Indian Institute of Science
Bangalore 560 012


# ಉತ್ತರ ಭಾರತ ಪ್ರವಾಸಗಳು
# Tours to Historical/ Religious Places

| | Tour | Frequency | Fare | |
|---|---|---|---|---|
| 1) | Delhi – Yamunotri – Gangotri – Badrinath – Kedarnath – Delhi | 1st/ 3rd Friday | 6,500/- | ** |
| 2) | Delhi – Badrinath – Kedarnath – Delhi | Every Mon/Fri | 4,000/- | ** |
| 3) | Delhi – Agra – Allahabad –Varanasi – Gaya – Ayodhya – Delhi | 1st/ 3rd Saturday | 5,500/- | ** |
| 4) | Delhi – Shimla – Kullu – Manali – Chandigarh – Delhi | Every Friday | 3,500/- | * |
| 5) | Delhi – Manali – Dalhousie – Vaishnodevi – Amritsar – Chandigarh – Delhi | Every Monday | 4,500/- | * |
| 6) | Delhi – Jaipur – Fathepur Sikri – Agra – Mathura – Delhi (Golden Triangle Tour) | Mon/Friday | 1,100/- | * |
| 7) | Delhi – Mussoorie – Haridwar – Rishikesh – Delhi | Tue/Friday | 1,000/- | * |
| 8) | AMARNATH YATRA (Once in a year during July coinciding Sravan Poornima) | | 3,500/- | |

** Including vegetarian food enroute, transport, accommodation & Guide Service
* Includes non A/c room accommodation on twin sharing basis by non A/c coach.

**We are running LFC Tours for all banks/ LIC employees. All the above tours are by Super Deluxe buses, starting from our New Delhi office.**

**Also contact for tours to South India & hotel accommodation bookings all over India**

Contact Our Offices for Advance Reservations : **Bangalore – 226 2633; Hyderabad – 330 7658; Vizag – 745565; Vijaywada – 576624 & Chennai – 538 5253**

ನೀವು ದಿಲ್ಲಿಗೆ ಬಂದಾಗ ಅತ್ಯಾಧುನಿಕ ಸೌಕರ್ಯಗಳೊಂದಿರುವ ನೂರಾರು ರೂಮ್‌ಗಳಿರುವ ಹೋಟೆಲ್ ಸದರನ್‌ನಲ್ಲಿ ವಸತಿ ತೆಗೆದುಕೊಳ್ಳಿ. ರುಚಿಯಾದ ಕರ್ನಾಟಕ ಮತ್ತು ಆಂಧ್ರದ ವಿವಿಧ ವ್ಯಂಜನಗಳು ನಮ್ಮ ಹೋಟೆಲ್‌ನಲ್ಲಿರುವ ರೆಸ್ಟೋರೆಂಟ್‌ಗಳಲ್ಲಿ ಸಿಗುವುದು.

**HOTEL SOUTHERN / SOUTHERN TRAVELS PVT. LTD.**

**(Recognised by Ministry of Tourism, Govt. of India)**

(ದೆಹಲಿಯಲ್ಲಿರುವ ದಕ್ಷಿಣ ಭಾರತದ ಪ್ರಮುಖ ವಾಣಿಜ್ಯ ಸಂಸ್ಥೆಗಳಲ್ಲಿ ಒಂದಾಗಿದೆ.)

Head Office: **18/2, Arya Samaj Road, Karol Bagh, New Delhi – 110 005**
**Ph. 572 2210, 573 9508 • Fax: 011-575 1308 • E-mail: southern@del2.vnsl.net.in**
Branch Office: **F-38, Dadar Manish Market, Senapati Bapat Marg, Dadar (West), Mumbai – 400 028**
**Ph: 432 6895, 432 6688 • Fax: 432 6688 • E-mail: southerntravels@vsnl.com**

Regn. No. 040015/86
Regn. No. TECH/47-202/MBI-2002
Date of Posting : 10-9-2002

ಅಹಿಂಸೆಯಿಂದ ಅಖಂಡತ್ವ
ಸತ್ಯದಿಂದ ಸಾರ್ವಭೌಮತ್ವ
ಸಹಿಷ್ಣುತೆಯಿಂದ ಸಮಾನತೆ
ಇದುವೇ ಸ್ವತಂತ್ರ ಭಾರತ ಜಗತ್ತಿಗೆ ಸಾರಿದ ಸ್ವಾತಂತ್ರ್ಯದ ತಿರುಳು.

ಭಾರತ ಸ್ವಾತಂತ್ರ್ಯ ಗಳಿಸಿ 55 ವರ್ಷಗಳಾದವು. ಆರಂಭದ ವರ್ಷಗಳಲ್ಲಿ ಬಡತನ, ನಿರುದ್ಯೋಗ, ಅನಕ್ಷರತೆ, ಮಹಿಳೆಯರ ಶೋಷಣೆ, ವಸತಿ, ಕೃಷಿ ಸೌಕರ್ಯಗಳಂತಹ ತೀವ್ರತರ ಸಮಸ್ಯೆಗಳ ಸವಾಲುಗಳೇ ಸ್ವತಂತ್ರ ಭಾರತದ ಮುಂದಿದ್ದವು.

ಕಳೆದ ಈ ವರ್ಷಗಳಲ್ಲಿ ದೇಶ ಹಲವಾರು ಯೋಜನಾ ಬದ್ಧ ಕಾರ್ಯಕ್ರಮಗಳ ಮೂಲಕ ಸಮಸ್ಯೆಗಳಿಗೆ ತಕ್ಕಮಟ್ಟಿಗೆ ಪರಿಹಾರ ಕಂಡುಕೊಂಡಿದೆಯಾದರೂ ಕೆಲವು ಮೂಲಭೂತ ಸಮಸ್ಯೆಗಳು ಇನ್ನೂ ದೇಶವನ್ನು ಕಾಡುತ್ತಲಿವೆ.

ಪ್ರಸಕ್ತ ಕರ್ನಾಟಕ ಸರಕಾರ ಈ ಸಮಸ್ಯೆಗಳ ಪರಿಹಾರಕ್ಕಾಗಿ ಹಲವಾರು ಅನುಕರಣಾರ್ಹ ಮಾದರಿ ಯೋಜನೆಗಳನ್ನು ರೂಪಿಸಿ ಅಭಿವೃದ್ಧಿಯ ಹಾದಿಯಲ್ಲೇ ಮುಂಚೂಣಿಯಲ್ಲಿದೆ.

● ರಾಜ್ಯದಲ್ಲಿ ವಸತಿ ರಹಿತರಿಗೆ 5 ವರ್ಷಗಳ ಅವಧಿಯಲ್ಲಿ 11 ಲಕ್ಷ ಮನೆಗಳನ್ನು ನಿರ್ಮಿಸುವ ಮಹತ್ವಾಕಾಂಕ್ಷೆಯೊಂದಿಗೆ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮವನ್ನು ಸ್ಥಾಪಿಸಿ ಕಾರ್ಯೋನ್ಮುಖವಾಗಿದೆ. ಕಳೆದ ಎರಡೂವರೆ ವರ್ಷಗಳಲ್ಲಿ 3,80,000 ಮನೆಗಳನ್ನು ನಿರ್ಮಿಸಲಾಗಿದೆ.

● ಮಹಿಳೆಯರು ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕವಾಗಿ ಸಶಕ್ತರಾಗಿ ಸ್ವಾವಲಂಬಿಗಳಾಗಲು ದೇಶದಲ್ಲೇ ಮಾದರಿಯೆನಿಸಿದೆ. ಸ್ತ್ರೀ ಶಕ್ತಿ ಯೋಜನೆಯನ್ನು ರೂಪಿಸಿ ಆರ್ಥಿಕ ಅಭಿವೃದ್ಧಿ ಚಟುವಟಿಕೆಗಳಲ್ಲಿ ತೊಡಗಿಸಿದೆ. 75,660 ಸ್ವಸಹಾಯ ಸ್ತ್ರೀ ಶಕ್ತಿ ಗುಂಪುಗಳು ಇಂದು ರಾಜ್ಯದಲ್ಲಿ ಕಾರ್ಯನಿರತವಾಗಿ ರೂ. 80 ಕೋಟಿಗಳ ಹಣ ತೊಡಗಿಸಿವೆ.

● 1 ರಿಂದ 12ನೆಯ ತರಗತಿಯವರೆಗೆ ಓದುತ್ತಿರುವ ಹೆಣ್ಣು ಮಕ್ಕಳಿಗೆ ಸಂಪೂರ್ಣ ಉಚಿತ ಶಿಕ್ಷಣ ಸೌಲಭ್ಯವನ್ನು ಕಲ್ಪಿಸಲಾಗಿದೆ.

● ದೇಶದ ಆರ್ಥಿಕ ವ್ಯವಸ್ಥೆಯ ಬೆನ್ನೆಲುಬಾದ ಬೇಸಾಯದ ಸರ್ವತೋಮುಖ ಅಭಿವೃದ್ಧಿಗೆ ರಾಜ್ಯ ಸರಕಾರ ಪ್ರಥಮ ಪ್ರಾಶಸ್ತ್ಯ ನೀಡಿದೆ. ಬೇಸಾಯದಲ್ಲಿ ಅಗತ್ಯ ಸಲಹೆ, ಸೂಚನೆ, ಗೊಬ್ಬರ, ಬೀಜ ಇತ್ಯಾದಿ ಸೌಕರ್ಯಗಳನ್ನು ಒದಗಿಸುವ 744 ರೈತಮಿತ್ರ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಎಲ್ಲಾ ರೈತರ ಭೂದಾಖಲೆಗಳನ್ನು ಭೂಮಿ ಯೋಜನೆ ಮೂಲಕ ಕಂಪ್ಯೂಟರ್‌ಗೆ ಅಳವಡಿಸಲಾಗಿದೆ. ರೈತರ ಬೆಳೆಗಳಿಗೆ ಯೋಗ್ಯ ಬೆಲೆ ದೊರಕಿಸಿ ಕೊಡುವುದಕ್ಕಾಗಿ ಮಾರುಕಟ್ಟೆ ಮಧ್ಯಪ್ರವೇಶ, ಮಧ್ಯವರ್ತಿಗಳ ಹಾವಳಿಯನ್ನು ನಿರ್ಮೂಲನಗೊಳಿಸುವ ರೈತ ಸಂತೆ ಯೋಜನೆ, ಪ್ರತ್ಯೇಕ ತೊಗರಿ ಅಭಿವೃದ್ಧಿ ಮಂಡಳಿ ಸ್ಥಾಪನೆ, ಇವು ಕೆಲವು ಪ್ರಮುಖ ಯೋಜನೆಗಳು.

● ರಾಜ್ಯದಲ್ಲಿ ಅತ್ಯುತ್ತಮ ಮೂಲಭೂತ ಸೌಕರ್ಯಗಳನ್ನು ಒದಗಿಸುವ ದಿಸೆಯಲ್ಲಿ ರಸ್ತೆ ಜಾಲ ನಿರ್ಮಾಣಕ್ಕಾಗಿ ಪ್ರತ್ಯೇಕ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ಸ್ಥಾಪಿಸಿ 7,101 ಕಿ.ಮೀ. ಉದ್ದದ ಗ್ರಾಮೀಣ ರಸ್ತೆಗಳನ್ನು ಮತ್ತು 142 ಸೇತುವೆಗಳನ್ನು ನಿರ್ಮಿಸಲಾಗಿದೆ. ಮುಂಬರುವ ಅವಧಿಯಲ್ಲಿ ಸಂಪರ್ಕ ರಹಿತ 61 ಗ್ರಾಮಗಳಿಗೆ ರಸ್ತೆ ಸಂಪರ್ಕ ಕಲ್ಪಿಸುವುದರೊಂದಿಗೆ ವ್ಯವಸ್ಥಿತ ಸಂಪರ್ಕ ಜಾಲ.

ಈಗ 152 ತಾಲೂಕುಗಳಲ್ಲಿ ಬರ ಪರಿಸ್ಥಿತಿ, ಅದನ್ನು ಸಮರ್ಥವಾಗಿ ಎದುರಿಸಲು ಕ್ರಮ, ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗವಕಾಶ, ಕುಡಿಯುವ ನೀರು ಮತ್ತು ದನಕರುಗಳಿಗೆ ಮೇವು ಪೂರೈಕೆ.

'ಈ ಸಲದ ಮುಂಗಾರು ಮಳೆಯ ವೈಫಲ್ಯದಿಂದ ಇಂದು ನಮ್ಮ ರಾಜ್ಯದಲ್ಲಿ ಬರ ಪರಿಸ್ಥಿತಿ ತಲೆದೋರಿದೆ. ಈ ಸಂಕಷ್ಟ ಪರಿಸ್ಥಿತಿಯನ್ನು ನಾವೆಲ್ಲರೂ ಒಗ್ಗಟ್ಟಿನಿಂದ, ಧೈರ್ಯದಿಂದ ಎದುರಿಸಿ ರಾಜ್ಯವನ್ನು ಮುನ್ನಡೆಸಬೇಕಾಗಿದೆ. ಈ ನಿಟ್ಟಿನಲ್ಲಿ ಸರಕಾರವು ಹಮ್ಮಿಕೊಂಡಿರುವ ಹಲವಾರು ಜನಪರ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಒಟ್ಟಾಗಿ ದುಡಿಯೋಣ. ಆ ಮೂಲಕ ರಾಜ್ಯದ ಸರ್ವಾಂಗೀಣ ಉನ್ನತಿಯನ್ನು ಸಾಧಿಸೋಣ'

**'ಜೈ ಹಿಂದ್! ಜೈ ಕರ್ನಾಟಕ !'**

ಎಸ್.ಎಂ. ಕೃಷ್ಣ
ಮುಖ್ಯಮಂತ್ರಿ

*ಸ್ವಾತಂತ್ರ್ಯದ ಸ್ಫೂರ್ತಿಯೊಂದಿಗೆ*
*ಮುನ್ನಡೆಯಲ್ಲಿ ಕರ್ನಾಟಕ*

**56ನೇ ಸ್ವಾತಂತ್ರ್ಯೋತ್ಸವ ಶುಭಾಶಯಗಳು**

## ಕರ್ನಾಟಕ ವಾರ್ತೆ

'ಸರ್ವ ಜನಾಂಗದ ಶಾಂತಿಯ ತೋಟ... ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ -ಕುವೆಂಪು'

Edited, Printed & Published by M.A.N. Prasad, On behalf of the Mysore Association, Mumbai. Tel.: 402 46 47
Printed at Aarati Art Printers, Fort, Mumbai-400 001. * 266 33 61 / 266 59 38